2018 ಕ.ತೀ.ವ 920

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಶ್ರೀನಿವಾಸ್ ಹರೀಶ್ ಕುಮಾರ್

ಕಲ್ಲವ್ವ ವಿರೂಪಾಕ್ಷಪ್ಪ ಬಣಕಾರ್ –ವಿರುದ್ಧ– ಭಾಗವ್ವ ಮೃತರಾಗಿರುವುದರಿಂದ ಇವರ ಕಾನೂನು ಸಮ್ಮತ ವಾರಸುದಾರರು ಮತ್ತು ಇತರರು*

ಸಿವಿಲ್ ಪ್ರಕ್ರಿಯಾ ಸಂಹಿತೆಯ 100ನೇ ಪ್ರಕರಣದ ಅಡಿಯಲ್ಲಿನ ನಿಯತ ಎರಡನೇ ಅಪೀಲು.

ಬನಹಟ್ಟಿಯ ಮುನ್ಸಿಫ್‌ನ ಕಡತದಲ್ಲಿರುವ ಮೂಲದಾವೆ ಸಂಖ್ಯೆ 3/1984ರಲ್ಲಿ ವಾದಿಯ ಕಾನೂನಾತ್ಮಕ ಪ್ರತಿನಿಧಿಗಳು, ಆರ್.ಎ.ಸಂಖ್ಯೆ 74/1996ರಲ್ಲಿ ಜಮಖಂಡಿಯ ತ್ವರಿತಗತಿ ನ್ಯಾಯಾಲಯವು ಹೊರಡಿಸಿದ ದಿನಾಂಕ 29.3.2005ರ ತೀರ್ಪನ್ನು ಪ್ರಶ್ನಿಸಿದ್ದಾರೆ. ಇಲ್ಲಿ, ಅಧಿವಿಚಾರಣಾ ನ್ಯಾಯಾಲಯವು, ಉಯಿಲನ್ನು ಯುಕ್ತವಾಗಿ ಬರೆದಿರುವ ಬಗ್ಗೆ ಊಹೆ ಮಾಡಲು ನೋಂದಣಿ ಅಧಿನಿಯಮದ 58 ರಿಂದ 60ನೇ ಪ್ರಕರಣವನ್ನು ಅನ್ವಯಿಸುವುದು. ಉಯಿಲಿನ ಪ್ರತಿಪಾದಕರು, ದೃಢೀಕರಣ ಮಾಡಿದವರು ಮತ್ತು ಉಯಿಲು ಬರೆದಿರುವವರು ಮೃತರಾಗಿರುವರೆಂದು ತಿಳಿಸಿದ್ದಾರೆ. ಈ ಕಾರಣಕ್ಕಾಗಿ, ಸಾಕ್ಷ್ಯ ಅಧಿನಿಯಮದ 68ನೇ ಪ್ರಕರಣದ ಮೇರೆಗೆ ಉಪಬಂಧಿಸಲಾದಂಥ ಉಯಿಲಿನ ರುಜುವಾತು ಸಾಧ್ಯವಾಗಿರಲಿಲ್ಲ. ಆದುದರಿಂದ ಅಧೀನ ನ್ಯಾಯಾಲಯಗಳು ಸರಿಯಾಗಿ, ಈ ಕೆಳಗಿನ ನಿರ್ಣಯಕ್ಕೆ ಬಂದಿರುತ್ತವೆ. ಆದರೆ, ನೋಂದಣಿ ಅಧಿನಿಯಮದ 58 ರಿಂದ 60ನೇ ಪ್ರಕರಣಗಳನ್ನು ಉಲ್ಲೇಖಿಸುವ ಮೊದಲು ಪ್ರತಿಪಾದಕರು, ಸಾಕ್ಷ್ಯ ಅಧಿನಿಯಮದ 69ನೇ ಪ್ರಕರಣವನ್ನು ಅವಲಂಬಿಸಿದ್ದನೇ ಎಂಬ ಬಗ್ಗೆ ಅಧಿವಿಚಾರಣಾ ನ್ಯಾಯಾಲಯವು ವಿಚಾರಣೆ ಮಾಡಿರಲಿಲ್ಲ. ಆ ರೀತಿಯಲ್ಲಿ, ಅಧೀನ ನ್ಯಾಯಾಲಯಗಳು, ನೋಂದಣಿ ಅಧಿನಿಯಮದ 58 ರಿಂದ 60ನೇ ಪ್ರಕರಣಗಳನ್ನು ಉಲ್ಲೇಖಿಸುವುದನ್ನು ನೇರ ರೀತಿಯಲ್ಲಿ ಕಾನೂನುಬದ್ಧವಾಗಿ ಸಮರ್ಥಿಸಿಕೊಂಡಿರಲಿಲ್ಲ. ಆದುದರಿಂದ ಕಾನೂನಿನ ಗಣನೀಯ ಪ್ರಶ್ನೆಗೆ ನಕಾರಾತ್ಮಕವಾಗಿ ಉತ್ತರಿಸಬೇಕಾದ

*ಆರ್.ಎಸ್.ಎ. ಸಂಖ್ಯೆ 1301/2005 (ಪಿಎಆರ್), ದಿನಾಂಕ 22ನೇ ಆಗಸ್ಟ್, 2017.

ಅಗತ್ಯತೆಯಿದೆ. ಈ ಪ್ರಕರಣವನ್ನು ಮತ್ತೊಂದು ದೃಷ್ಟಿಕೋನದಿಂದಲೂ ಪರಿಶೀಲಿಸಬಹುದಾಗಿದೆ. ಸಾಕ್ಷ್ಯ ಅಧಿನಿಯಮದ ೮೯ನೇ ಪ್ರಕರಣದಲ್ಲಿ ಉಲ್ಲೇಖಿಸಲಾದುದು ಈ ಮುಂದಿನಂತ್ತಿದೆ.

"೮೯. ಯುಕ್ತ ಜಾರಿ, ಮುಂತಾದವುಗಳನ್ನು ಹಾಜರುಪಡಿಸಿಲ್ಲವೆಂಬ ಬಗ್ಗೆ ಪೂರ್ವಭಾವನೆ.– ನ್ಯಾಯಾಲಯವು, ಹಾಜರುಪಡಿಸಬೇಕೆಂಬ ನೋಟೀಸನ್ನು ನೀಡಿದ ನಂತರ ಕೋರಲಾದ ಮತ್ತು ಹಾಜರುಪಡಿಸಿದ ಪ್ರತಿಯೊಂದು ದಸ್ತಾವೇಜನ್ನು, ಕಾನೂನಿನ ಮೂಲಕ ಅಗತ್ಯಪಡಿಸಲಾದ ರೀತಿಯಲ್ಲಿ ದೃಢೀಕರಿಸಲಾಗಿತ್ತು. ಮೊಹರು ಮಾಡಲಾಗಿತ್ತು ಜಾರಿಗೊಳಿಸಲಾಗಿತ್ತು ಎಂದು ಪೂರ್ವಭಾವಿಸತಕ್ಕದ್ದು.

ಉಯಿಲಿನ ಅಡಿಯಲ್ಲಿ ಫಲಾನುಭವಿಯೂ ಆಗಿದ್ದು, ಅವಳ ಬಳಿ ಅದು ಇದ್ದುದರಿಂದ ೩ನೇ ಸಂಖ್ಯೆಯ ಪ್ರತಿವಾದಿಯು, ಮೂಲ ಉಯಿಲನ್ನು ಹಾಜರುಪಡಿಸಲು ಕೋರಲಾಗಿತ್ತು ಎಂಬುದು ನಮ್ಮ ಮುಂದಿರುವ ಸಂಗತಿಯಾಗಿದೆ. ವಾಸ್ತವವಾಗಿ ಅದು ಅವರ ವಶದಲ್ಲಿದ್ದರೆ, ವಿಶೇಷವಾಗಿ ಆ ಉಯಿಲಿನ ಸಂಪೂರ್ಣ ವಾದವನ್ನು ಅವರು ಆಧರಿಸಿರುವಾಗ ನ್ಯಾಯಾಲಯದ ಮುಂದೆ ಉಯಿಲನ್ನು ಹಾಜರುಪಡಿಸದಿರಲು ಪ್ರತಿಪಾದಕರಿಗೆ ಯಾವುದೇ ಕಾರಣವಿರುತ್ತಿರಲಿಲ್ಲ. ೩ನೇ ಸಂಖ್ಯೆಯ ಪ್ರತಿವಾದಿಯು ಅದನ್ನು ಹಾಜರುಪಡಿಸದಿದ್ದಾಗ ಉಯಿಲನ್ನು ನಿರಾಕರಿಸುವುದಲ್ಲದೆ ಅದನ್ನು ಅವಳು ಹೊಂದಿಲ್ಲವೆಂದು ಹೇಳುವಾಗ, ಅವಳ ನಡತೆಯು ಆತ್ಮ ಸಾಕ್ಷಿಗೆ ವಿರುದ್ಧವಾಗಿರುವುದು ಕಂಡು ಬರುತ್ತಿದೆ; ಅವಳ ಪ್ರಕಾರ ಅವನು ಕುಟುಂಬಕ್ಕೆ ಅನ್ಯ ವ್ಯಕ್ತಿಯಾಗಿರುವುದರಿಂದ ಸ್ವತ್ತನ್ನು 4ನೇ ಸಂಖ್ಯೆಯ ಪ್ರತಿವಾದಿಗೆ ತಪ್ಪಿಸಲು ಅವಳು ಅಂಥ ನಿಲುವನ್ನು ತಳೆದಿರಬಹುದು. ಇದು ಮೊದಲ ಅಪೀಲು ನ್ಯಾಯಾಲಯದ ಅಭಿಪ್ರಾಯವಾಗಿದ್ದು, ಇದು ಇಲ್ಲದೆ ಇರುವಂಥದ್ದೇನೂ ಅಲ್ಲ. ಆದುದರಿಂದ ೩ನೇ ಸಂಖ್ಯೆಯ ಪ್ರತಿವಾದಿಯು ಅದನ್ನು ವಶದಲ್ಲಿಟ್ಟುಕೊಂಡು ಉಯಿಲನ್ನು ಹಾಜರುಪಡಿಸದಿಲ್ಲದಿರುವಾಗ, ಇದನ್ನು ಹಾಗೆ ಭಾವಿಸಿರುವುದರಿಂದ, ಉಯಿಲಿನ ದೃಢೀಕರಣ ಮತ್ತು ಬರೆದಿರುವುದಕ್ಕೆ ಸಂಬಂಧಪಟ್ಟಂತೆ ಸಾಕ್ಷ್ಯ ಅಧಿನಿಯಮದ ೮೯ನೇ ಪ್ರಕರಣದ ಮೇರೆಗೆ ಪೂರ್ವಭಾವನೆಯನ್ನು ತಳೆಯಬಹುದಾಗಿದೆ.

ಅಧೀನ ನ್ಯಾಯಾಲಯಗಳು ಗಮನಿಸಿರುವ ಮತ್ತೊಂದು ಸನ್ನಿವೇಶವಿದೆ. ವಾದಿಯು, ಅಪೀಲಿನ ಅಡಿಯಲ್ಲಿ ಪ್ರಸ್ತುತ ದಾವೆಯಲ್ಲಿ 4 ಮತ್ತು 5ನೇ ಸಂಖ್ಯೆಯ

ಪ್ರತಿವಾದಿಯ ವಿರುದ್ಧದ ಶಾಶ್ವತ ಪ್ರತಿಬಂಧಕಾಜ್ಞೆಗಾಗಿ ಮೂಲ ದಾವೆ ಸಂಖ್ಯೆ: 91/1982ರಲ್ಲಿ ದಾವೆಯನ್ನು ಸಲ್ಲಿಸಿದ್ದರೆಂಬ ಸಂಗತಿಯನ್ನು ಒಪ್ಪಿಕೊಳ್ಳಲಾಗಿದೆ. ಆ ದಾವೆಯಲ್ಲಿ ದಿನಾಂಕ: 29.09.1961ರ ಉಯಿಲನ್ನು ಈ ಪ್ರತಿವಾದಿಗಳು ಅವಲಂಬಿಸಿರುವುದನ್ನು ಗಮನಿಸಿದ್ದು, ಸದರಿ ಉಯಿಲನ್ನು ರದ್ದುಗೊಳಿಸಲಾಗಿದೆಯೆಂದು ತಿಳಿಸಲು ಅವಳ ವಾದಪತ್ರವನ್ನು ತಿದ್ದುವ ಪ್ರಯತ್ನ ಮಾಡಲಾಗಿದೆ. ನ್ಯಾಯಾಲಯವು, ಆ ತಿದ್ದುಪಡಿಗೆ ಅನುಮತಿ ನೀಡಿರಲಿಲ್ಲ ಆದರೆ, ಅದರಲ್ಲಿ ಏನೇ ಒಳಗೊಂಡಿದ್ದರೂ, ವಾದಿಯು, ಅವಳ ತಂದೆಯು ಉಯಿಲನ್ನು ಬರೆದಿರುವ ಬಗ್ಗೆ ಅರಿವಿತ್ತು ಎಂದು ಊಹಿಸುವ ಆಧಾರವನ್ನು ಒದಗಿಸಲಾಗಿದೆ. ಇಲ್ಲಿ ಈ ಪ್ರಕರಣದಲ್ಲಿ, ವಾದಿಯು, ಸದರಿ ಉಯಿಲು ಖೋಟಾ ಆಗಿದೆಯೆಂದು ಹೇಳಿಕೆ ನೀಡಿರಬಹುದು, ಆದರೆ, ವಿರುದ್ಧದ ನಿಲುವನ್ನು ತೆಗೆದುಕೊಳ್ಳುವುದರಿಂದ ಅವಳ ಮೊದಲಿನ ದಾವೆಯಲ್ಲಿ ಮಾಡಲಾದ ಅವಳ ಪೂರ್ವ ಹೇಳಿಕೆಯು, ಅವಳನ್ನು ಅಡ್ಡಿಪಡಿಸುವುದಷ್ಟೇ ಅಲ್ಲದೆ, ವಾದಿಯ ಕಾನೂನು ಪ್ರತಿನಿಧಿ ಪ್ರಾ.ಸಾ.1ನ್ನೂ ಸಹ ಅಡ್ಡಿಪಡಿಸುತ್ತದೆ. ಅಧಿವಿಚಾರಣಾ ನ್ಯಾಯಾಲಯವು ಹಿಂದಿನ ಹೇಳಿಕೆಯನ್ನು ಸಂಬಂಧಪಟ್ಟ ಸಾಕ್ಷ್ಯವನ್ನು ದಾಖಲಿಸುವ ಹೊತ್ತಿಗೆ ಅವಳು ಮೃತಳಾಗಿದ್ದರಿಂದ, ಹೇಳಿಕೆಯನ್ನು ಅವಳ ಗಮನಕ್ಕೆ ತಂದಿರುವುದನ್ನು, ವಾದಿಯ ಮೂಲಕ ರುಜುವಾತುಪಡಿಸಲು ಸಾಧ್ಯವಾಗಿರುವುದಿಲ್ಲವೆಂದು ಅಭಿಪ್ರಾಯಪಟ್ಟಿದೆ. ವಾದಪತ್ರದಲ್ಲೇ ವಾದಿಯು, ಹಿಂದಿನ ದಾವೆಯಲ್ಲಿ ತನ್ನ ವಾದಪತ್ರವನ್ನು ತಿದ್ದಲು ಬಯಸಿದ್ದೆನೆಂದು, ನಿರ್ದಿಷ್ಟವಾಗಿ ತಿಳಿಸಿರುವುದರಿಂದ, ವಾದಿಯು ಅಥವಾ ಪ್ರಾ.ಸಾ.1ರ ಗಮನಕ್ಕೆ ತರುವುದು ಅಗತ್ಯವಾಗಿರಲಿಲ್ಲ ಎಂಬುದು ಅವಶ್ಯವಾಗಿದೆ. ವಾದಪತ್ರದಲ್ಲಿರುವ ಈ ದೃಢೋಕ್ತಿಯು, ಸಾಕ್ಷ್ಯ ಅಧಿನಿಯಮದ 58ನೇ ಪ್ರಕರಣದ ಮೇರೆಗಿನ ಒಪ್ಪಿಗೆಗೆ ಕಾರಣವಾಗುತ್ತದೆ ಮತ್ತು ಅವಳ ತಂದೆಯು, ಉಯಿಲನ್ನು ಬರೆದಿದ್ದು, ಅವಳ ಪ್ರಕಾರ ಅದನ್ನು ರದ್ದುಗೊಳಿಸಲಾಗಿದೆಯೆಂಬುದನ್ನು ವಾದಿಯ ಗಮನಕ್ಕೆ ತರಲಾಗಿತ್ತೆಂಬ ಯುಕ್ತ ಊಹೆಗಳನ್ನು ಮಾಡಬಹುದಾಗಿದೆ. ಯಾವುದೇ ರೀತಿಯಲ್ಲಿ ದಾವೆಯನ್ನು ಅವರ ಪರವಾಗಿ ಡಿಕ್ರಿಗೊಳಿಸಲಾಗಿದ್ದರೆ, ವಾದಿಯು ಅಥವಾ ಅವಳ ಕಾನೂನು ಪ್ರತಿನಿಧಿಯು, ಉಯಿಲನ್ನು ರದ್ದುಗೊಳಿಸಿರುವುದನ್ನು ರುಜುವಾತುಪಡಿಸಬೇಕು. ಇದನ್ನು ಮಾಡಿರದಿದ್ದುದರಿಂದ, 4 ಮತ್ತು 5ನೇ ಪ್ರತಿವಾದಿಗಳು ತೆಗೆದುಕೊಂಡ ವಾದವು ಅಂಗೀಕೃತವಾಗುತ್ತದೆ. ಆದುದರಿಂದ, ಈ ಪ್ರಕರಣದ ಸನ್ನಿವೇಶಗಳ ಗುಚ್ಛದಲ್ಲಿ, ಉಯಿಲನ್ನು ಬರೆದಿರುವುದನ್ನು, ಸಾಕ್ಷ್ಯ ಅಧಿನಿಯಮದ

69ನೇ ಪ್ರಕರಣದ ಪ್ರಕಾರ ರುಜುವಾತುಪಡಿಸದಿದ್ದರೂ, 4 ಮತ್ತು 5ನೇ ಸಂಖ್ಯೆಯ ಪ್ರತಿವಾದಿಗಳು ಮುಂದಿಟ್ಟಿರುವ ವಾದದಲ್ಲ ಬಾಹುಳ್ಯತೆಯಿದೆ.

ಸಂದೇಹಾಸ್ಪದ ಸನ್ನಿವೇಶಗಳಿಗೆ ಸಂಬಂಧಿಸಿದಂತೆ ಅಪೀಲುದಾರರ ವಕೀಲರು, ತಮ್ಮ ವಾದ–ವಿವಾದದ ಅವಧಿಯಲ್ಲಿ ಪಟ್ಟಿ ಮಾಡಿದ್ದು ಅದು ಅಧೀನ ನ್ಯಾಯಾಲಯಗಳೆರಡೂ, ಉಯಿಲು, ಸಂದೇಹಾಸ್ಪದ ಸನ್ನಿವೇಶಗಳಿಂದ ಮುಕ್ತವಾಗಿದೆಯೆಂಬ ಸಂಗತಿಗಳ ಆಧಾರದ ಮೇಲೆ ಅಭಿಪ್ರಾಯಪಟ್ಟಿವೆಯೆಂದು ನಿರೂಪಿಸಬೇಕಾಗುತ್ತದೆ. ಅವಳ ಹೆಸರಿನಲ್ಲಿ ಉಯಿಲನ್ನು ಒಪ್ಪದಿರುವ ಸಂದರ್ಭದಲ್ಲಿ ಮೂರನೇ ಪ್ರತಿವಾದಿಯ ನಡತೆಯನ್ನು ಚರ್ಚಿಸಲಾಗಿದೆ. ಮೊದಲ ಅಪೀಲು ನ್ಯಾಯಾಲಯವು, ಅವಳ ಮತ್ತು ವಾದಿಯ ನಡುವೆ ಹೂಟವೇರ್ಪಟ್ಟಿರುವುದನ್ನು ಗುರುತಿಸಿದೆ. ಅಪೀಲುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು, ಸಂಗತಿಯನ್ನು ಕಂಡುಹಿಡಿಯುವ ನ್ಯಾಯಾಲಯಗಳು ಸಾಕ್ಷ್ಯವನ್ನು ಯುಕ್ತವಾಗಿ ಮೌಲ್ಯಮಾಪನ ಮಾಡಲು ವಿಫಲವಾಗಿದೆಯೆಂಬುದನ್ನು ಪ್ರದರ್ಶಿಸಲು ವಿಫಲವಾಗಿವೆ. ಸಂಗತಿಗಳನ್ನಾಧರಿಸಿದ ನಿರ್ಣಯಗಳಲ್ಲಿ ಹಸ್ತಕ್ಷೇಪ ಮಾಡಲು ಸಾಧ್ಯವಿಲ್ಲ. ಇದರ ಪರಿಣಾಮವಾಗಿ ಈ ಅಪೀಲು ವಿಫಲವಾಗಿರುವುದರಿಂದ ಅಪೀಲನ್ನು ವೆಚ್ಚವಿಲ್ಲದೆ ವಜಾಗೊಳಿಸಲಾಗಿದೆ.

*ಉಲ್ಲೇಖಿಸಲಾದ ಮೊಕದ್ದಮೆಗಳು* *ಪ್ಯಾರಾಗಳಲ್ಲಿ*

1. *{1994 (1) ಸಿಸಿಸಿ 477}*
   *ರಾಜ್‌ಕುಮಾರಿ –ವಿರುದ್ಧ– ಶ್ರೀ ಲಾಲ್ ಚಂದ್* *(ಉಲ್ಲೇ) 10*
2. *(ಎಐಆರ್ 1970 ಪಿ ಮತ್ತು ಎಚ್182)*
   *ಗುರ್‌ಬಕ್ಸ್ ಸಿಂಗ್ ಮತ್ತು ಇತರರು –ವಿರುದ್ಧ–*
   *ಬಿಷನ್ ದಾಸ್ 'ಚೇಲಾ' ಕೌಲ್ ದಾಸ್ ಮತ್ತು ಇತರರು* *(ಉಲ್ಲೇ) 11*
3. *ಐಎಲ್‌ಆರ್ 1996 ಕೆಎಆರ್ 1517*
   *ಹನುಮಪ್ಪ ಭೀಮಪ್ಪ ಕೌಜಗೇರಿ –ವಿರುದ್ಧ–*
   *ಭೀಮಪ್ಪ ಸಂಗಪ್ಪ ಅಸಾರಿ* *(ಉಲ್ಲೇ) 11*

*4. ಎಐಆರ್ 1978 ಪಿ ಮತ್ತು ಹೆಚ್ 285*
*ಶಿವ್ ದಾಸ್ ಮತ್ತು ಇತರರು –ವಿರುದ್ಧ–*
*ದೇವ್‌ಕಿ ಮತ್ತು ಇತರರು (ಉಲ್ಲೇ) 11*

*5. ಎಐಆರ್ 1977 ಕೇರಳ 41*
*ಕುನ್ಹಮಿನ ಉಮ್ಮಾ ಮತ್ತು ಇತರರು –ವಿರುದ್ಧ–*
*ವಿಶೇಷ ತಹಸೀಲ್ದಾರ್ ಮತ್ತು ಇತರರು (ಉಲ್ಲೇ) 11*

*6. ಎಐಆರ್ 1969 ಎಸ್‌ಸಿ 1147*
*ಎಂ.ಎಲ್. ಅಬ್ದುಲ್ ಜಬ್ಬಾರ್ ಸಹೀಬ್ –ವಿರುದ್ಧ–*
*ಹೆಚ್. ವೆಂಕಟ ಶಾಸ್ತ್ರಿ ಮತ್ತು ಮಕ್ಕಳು ಹಾಗೂ ಇತರರು (ಉಲ್ಲೇ) 14*

ಅರ್ಜಿದಾರರ ಪರ: ಶ್ರೀ ರವಿ ಎಸ್. ಬಾಳೀಕಾಯಿ, ವಕೀಲರು,
3ನೇ ಪ್ರತ್ಯರ್ಜಿದಾರರ ಪರವಾಗಿ ಹಾಜರಾಗಿರುವ ವಕೀಲರಾದ ಶ್ರೀ ಉಮೇಶ್ ವಿ. ಮಮದಾಪುರ್ ರವರು ಗೈರು ಹಾಜರಾಗಿರುತ್ತಾರೆ,
5ನೇ ಪ್ರತ್ಯರ್ಜಿದಾರರ ಪರ: ಶ್ರೀ ಮೃತ್ಯುಂಜಯ್ ಟಾಟಾ ಬಂಗಿ, ಪ್ರತ್ಯರ್ಜಿದಾರ 1 (ಎ, ಬಿ, ಸಿ, ಎ ಎಫ್‌ಗೆ ಎಚ್/ಎಸ್ ಜಾರಿ ಮಾಡಲಾಗಿದೆ)
ಪ್ರತ್ಯರ್ಜಿದಾರ 1ಡಿ, 2ಎ ಯಿಂದ ಇವರೆಗೆ,
4(ಎ ಮತ್ತು ಡಿ) ಮತ್ತು 6ನೇ ಪ್ರತ್ಯರ್ಜಿದಾರರಿಗೆ ಜಾರಿ ಮಾಡಿದೆ.

## ತೀರ್ಪು

**ನ್ಯಾಯಮೂರ್ತಿ ಶ್ರೀ ಶ್ರೀನಿವಾಸ್ ಹರೀಶ್ ಕುಮಾರ್:**

ಬನಹಟ್ಟಿಯ ಮುನ್ಸಿಫ್‌ನ ಕಡತದಲ್ಲಿರುವ ಮೂಲದಾವೆ ಸಂಖ್ಯೆ 3/1984ರಲ್ಲಿ ವಾದಿಯ ಕಾನೂನಾತ್ಮಕ ಪ್ರತಿನಿಧಿಗಳು, ಆರ್.ಎ.ಸಂಖ್ಯೆ 74/1996ರಲ್ಲಿ ಜಮಖಂಡಿಯ ತ್ವರಿತಗತಿ ನ್ಯಾಯಾಲಯವು ಹೊರಡಿಸಿದ ದಿನಾಂಕ 29.3.2005ರ ತೀರ್ಪನ್ನು ಪ್ರಶ್ನಿಸಿದ್ದಾರೆ.

2. ಪಕ್ಷಕಾರರು ಮಂಡಿಸಿದ ವಾದವಿವಾದಗಳನ್ನು ಸಂಕ್ಷಿಪ್ತವಾಗಿ ತಿಳಿಸಲಾಗಿದ್ದು, ಅದು ಗುರಪ್ಪ ಚನ್ನಪರಪ್ಪ ಮಂಡಿ (ವಂಶಸ್ಥ) ಎಂಬೊಬ್ಬರಿಗೆ ಸೇರಿದ ಬನಹಟ್ಟಿ ವಿಭಾಗ ಸಂ.1 ರಲ್ಲಿರುವ ಆರ್.ಬಿ.ಟಿ.ಎಂ.ಸಿ ಸಂ.204ನ್ನು ಹೊಂದಿರುವ ಮನೆ ಸ್ವತ್ತಾಗಿದೆ. (ಇಲ್ಲಿ ಇನ್ನು ಮುಂದೆ ದಾವಾ ಸ್ವತ್ತೆಂದು ಉಲ್ಲೇಖಿಸಲಾಗಿದೆ). ಇವನಿಗೆ ಇಬ್ಬರು ಹೆಂಡತಿಯರು ಎಂದರೆ ಭಾಗವ್ವ ಮತ್ತು ರಾಚವ್ವ ಎಂಬ ಇಬ್ಬರು ಹೆಂಡತಿಯರಿದ್ದಾರೆ. ವಾದಿ ಕಲ್ಲವ್ವ ಮತ್ತು ತಂಗೆವ್ವ, ಭಾಗವ್ವನ ಹೆಣ್ಣುಮಕ್ಕಳಾಗಿದ್ದಾರೆ ಮತ್ತು ಎರಡನೇ ಹೆಂಡತಿ ರಾಚವ್ವನಿಗೆ ಭಾಗವ್ವ (ಪ್ರತಿವಾದಿ ಸಂ.1) ಜಾನಕಿಬಾಯಿ, ರೇವಕ್ಕ (ಪ್ರತಿವಾದಿ ಸಂ.2) ಮತ್ತು ಸಣ್ಣವ್ವ (ಪ್ರತಿವಾದಿ ಸಂ.3) ಎನ್ನುವ ನಾಲ್ಕುಜನ ಹೆಣ್ಣುಮಕ್ಕಳಿದ್ದಾರೆ. ವಂಶಸ್ಥನ ಇಬ್ಬರು ಹೆಂಡತಿಯರು ಅವನಿಗಿಂತ ಮೊದಲೇ ಮರಣ ಹೊಂದಿದ್ದಾರೆ. ಅವನ ಎರಡನೇ ಹೆಂಡತಿಯ ಎರಡನೇ ಮಗಳು ಜಾನಕಿಬಾಯಿಗೆ ಕಸ್ತೂರಿ ಎನ್ನುವ ಹೆಸರಿನ ಮಗಳಿದ್ದಾಳೆ. 4ನೇ ಸಂಖ್ಯೆಯ ಪ್ರತಿವಾದಿ ಆನಂದಪ್ಪನು, ಕಸ್ತೂರಿಯ ಪತಿ. ಜಾನಕಿಬಾಯಿಯು 1963ನೇ ಇಸವಿಯಲ್ಲಿ ಮೃತಳಾಗಿದ್ದಾಳೆ. ವಾದಿಯು, ದಾವಾ ಸ್ವತ್ತು ನನ್ನ ತಂದೆಗೆ ಸೇರಿರುವುದರಿಂದ, ಅದರಲ್ಲಿ ತಾನು 1/5ರಷ್ಟು ಭಾಗಕ್ಕೆ ಹಕ್ಕುಳ್ಳವಳಾಗಿದ್ದೆನೆಂದು ವಾದಿಸಿದ್ದಾಳೆ. ಅವಳು, 1 ರಿಂದ 3 ರ ವರೆಗಿನ ಪ್ರತಿವಾದಿಗಳು ಸದರಿ ಸ್ವತ್ತಿನ ಜಂಟಿ ಒಡೆತನವನ್ನು ಕ್ಲೇಮು ಮಾಡಿದ್ದಾಳೆ ಮತ್ತು 4ನೇ ಸಂಖ್ಯೆಯ ಪ್ರತಿವಾದಿಯು, 5ನೇ ಸಂಖ್ಯೆಯ ಪ್ರತಿವಾದಿಗೆ ಅರ್ಧಭಾಗವನ್ನು ಮಾರಾಟ ಮಾಡಲು ಹಕ್ಕು ಹೊಂದಿರದಿದ್ದರೂ, ಅವನು ಖರೀದಿಸಿರುವನೆಂದು ಹೇಳಲಾಗಿರುವ ಭಾಗವನ್ನು, ಕ್ಲೇಮು ಮಾಡಿರುವ 5ನೇ ಸಂಖ್ಯೆಯ ಪ್ರತಿವಾದಿಯು, 4ನೇ ಸಂಖ್ಯೆಯ ಪ್ರತಿವಾದಿಯಿಂದ ದಾವಾ ಸ್ವತ್ತಿನ ಅರ್ಧಭಾಗವನ್ನು ಖರೀದಿ ಮಾಡಿ ಕ್ಲೇಮು ಮಾಡಿರುವನೆಂದು ಆಪಾದಿಸಲಾಗಿದೆ. ವಾದಿಯು, ತನ್ನ ಸಹೋದರಿ ಕಸ್ತೂರಿಯು ದಾವಾ ಸ್ವತ್ತನ್ನು ಹೊಂದಿದ್ದು, ಪಾಲನ್ನು ಖರೀದಿಸಲು ಹಿಂದೂ ಉತ್ತರಾಧಿಕಾರ ಅಧಿನಿಯಮದ 22ನೇ ಪ್ರಕರಣದ ಮೇರೆಗೆ ಆದ್ಯತಾ ಹಕ್ಕನ್ನು ತಾನು ಹೊಂದಿರುವೆನೆಂದು ತಿಳಿಸಿದ್ದಾರೆ. ವಾಸ್ತವವಾಗಿ, ವಾದಿಯು, 5ನೇ ಸಂಖ್ಯೆಯ ಪ್ರತಿವಾದಿಗೆ ದಾವಾ ಸ್ವತ್ತಿನ ಯಾವುದೇ ಭಾಗದಲ್ಲಿರುವ ಅವನ ಹಕ್ಕನ್ನು ಅಧಿಕಾರ ಅಥವಾ ಹಿತಾಸಕ್ತಿಯನ್ನು ಮಾರಾಟ ಮಾಡುವುದರಿಂದ ತಡೆಯಲು

ಮತ್ತು ಅವಳ ಶಾಂತಿಯುತ ಸ್ವಾಧೀನತೆ ಮತ್ತು ದಾವಾಸ್ವತ್ತನ್ನು ಅನುಭೋಗಿಸುವುದಕ್ಕೆ ತಡೆಯನ್ನುಂಟು ಮಾಡುವುದರಿಂದ 5ನೇ ಸಂಖ್ಯೆಯ ಪ್ರತಿವಾದಿಯನ್ನು ತಡೆಯಲು 4ನೇ ಸಂಖ್ಯೆಯ ಪ್ರತಿವಾದಿಯ ವಿರುದ್ಧ ಶಾಶ್ವತ ಪ್ರತಿಬಂಧಕಾಜ್ಞೆಯನ್ನು ನೀಡುವ ಸಂಬಂಧ ಮೂಲದಾವೆ ಸಂ.91/1992ರಲ್ಲಿ ದಾವೆಯನ್ನು ಹೂಡಿರುವರು. ಸದರಿ ದಾವೆಯಲ್ಲಿ 5ನೇ ಸಂಖ್ಯೆಯ ಪ್ರತಿವಾದಿಯು, ತಾನು 4ನೇ ಸಂಖ್ಯೆಯ ಪ್ರತಿವಾದಿಯಿಂದ ದಾವಾ ಸ್ವತ್ತಿನ ಅರ್ಧಭಾಗವನ್ನು ಖರೀದಿಸಿರುವೆನೆಂದು ವಾದಿಸಿದ್ದಾನೆ. ಅವನು, ಸದರಿ ದಾವೆಯಲ್ಲಿ, 29.09.1961ರಂದು, ವಂಶಸ್ಥನು,ತನ್ನ ಮೊಮ್ಮಗಳಾದ ಕಸ್ತೂರಿಗೆ ದಾವಾ ಸ್ವತ್ತಿನ ಅರ್ಧಭಾಗ ಉಯಿಲು ನೀಡಿ ಉಯಿಲನ್ನು ಬರೆದಿರುವನೆಂದು ಮತ್ತು ಮತ್ತರ್ಧ ಭಾಗವನ್ನು ತನ್ನ ಹೆಣ್ಣುಮಕ್ಕಳು ಎಂದರೆ 3ನೇ ಸಂಖ್ಯೆಯ ಪ್ರತಿವಾದಿ ಸಣ್ಣವ್ವಳಿಗೆ ನೀಡಿರುವರೆನ್ನುವ ವಾದವನ್ನು ತೆಗೆದಿದ್ದಾನೆ. ಈ ಕಸ್ತೂರಿಯು, ತನ್ನ ಪತಿಯ ಹೆಸರಿಗೆ ಎಂದರೆ 4ನೇ ಸಂಖ್ಯೆಯ ಪ್ರತಿವಾದಿಗೆ, ಸದರಿ ಸ್ವತ್ತಿನ ಅರ್ಧಭಾಗಕ್ಕೆ ಉಯಿಲನ್ನು ಬರೆದಿದ್ದು, ಅದನ್ನು ಅವಳ ತಾತನು ಅವಳಿಗೆ ನೀಡಿರುತ್ತಾನೆ. ಕಸ್ತೂರಿಯು, 1963ನೇ ವರ್ಷದಲ್ಲಿ ಮೃತಳಾಗಿದ್ದುದರಿಂದ ಸದರಿ ಉಯಿಲನ್ನು ಜಾರಿಗೆ ತಂದಿರುವುದರಿಂದ 4ನೇ ಸಂಖ್ಯೆಯ ಪ್ರತಿವಾದಿಯು ಆ ಅರ್ಧಭಾಗಕ್ಕೆ ನಿಜವಾದ ಮಾಲೀಕನಾಗಿರುವನು. ಆಗ 4ನೇ ಸಂಖ್ಯೆಯ ಪ್ರತಿವಾದಿಯು, ದಿನಾಂಕ 26.05.1973ರಂದು ಕ್ರಯಪತ್ರವನ್ನು ನೋಂದಾವಣಿ ಮಾಡುವ ಮೂಲಕ 5ನೇ ಸಂಖ್ಯೆಯ ಪ್ರತಿವಾದಿಗೆ ಆ ಸ್ವತ್ತನ್ನು ಮಾರಾಟ ಮಾಡಿರುವನು. ಮೂಲದಾವೆ ಸಂ.91/1992ರಲ್ಲಿ 5ನೇ ಸಂಖ್ಯೆಯ ಪ್ರತಿವಾದಿಯು ತೆಗೆದುಕೊಂಡ ವಾದವನ್ನು ಗಮನಕ್ಕೆ ತೆಗೆದುಕೊಂಡು, ವಾದಿಯು, ವಾದಪತ್ರವನ್ನು ತಿದ್ದುಪಡಿ ಮಾಡಲು ಬಯಸಿದ್ದಾರೆ. ಆದರೆ, ಅವಳ ಅರ್ಜಿಯು ವಜಾಗೊಂಡಿತ್ತು. ಅವಳು ಮತ್ತೊಂದು ದಾವೆಯನ್ನು ಹೂಡಲು ಅನುಮತಿಯನ್ನು ಕೋರಿ ದಿನಾಂಕ 20.12.1983ರಂದು ಆ ದಾವೆಯನ್ನು ಹಿಂಪಡೆದಿದ್ದಾಳೆ. ಈ ವಿವರಗಳನ್ನು ನೀಡಿ, ಮತ್ತೆ, ವಾದಿಯು, ಕಸ್ತೂರಿಯ ಮತ್ತು 3ನೇ ಸಂಖ್ಯೆ ಪ್ರತಿವಾದಿ ಹೆಸರಿನಲ್ಲಿ ಉಯಿಲು ಬರೆಯಲು ವಂಶಸ್ಥನು ಮಾನಸಿಕ ಸ್ಥಿರತೆಯನ್ನು ಹೊಂದಿರಲಿಲ್ಲ ಎಂಬ ವಾದವನ್ನು ಮಂಡಿಸಿದ್ದಾಳೆ. ಈ ಉಯಿಲು ಸೃಷ್ಟಿಮಾಡಿದ ದಸ್ತಾವೇಜಾಗಿದೆ. ಆದುದರಿಂದ ಕಸ್ತೂರಿ ಮತ್ತು ಸಣ್ಣವ್ವ, ಉಯಿಲಿನ ಆಧಾರದ ಮೇಲೆ ಯಾವುದೇ ಹಕ್ಕು ಮತ್ತು ಅಧಿಕಾರವನ್ನು

5ನೇ ಸಂಖ್ಯೆಯ ಪ್ರತಿವಾದಿಯ ಹೆಸರಿನಲ್ಲಿ 4ನೇ ಸಂಖ್ಯೆಯ ಪ್ರತಿವಾದಿಯು ಬರೆದುಕೊಟ್ಟ ಕ್ರಯಪತ್ರ ಅವಳ ಹಿತಾಸಕ್ತಿಗೆ ಬದ್ಧವಾಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ, ವಾದಿಯು ದಾವಾ ಸ್ವತ್ತಿನ ಭಾಗವನ್ನು ಕ್ಲೇಮು ಮಾಡಿದ್ದಾರೆ.

3. ತುಂಬಾ ಆಶ್ಚರ್ಯಕರವಾಗಿ, ಅವಳ ತಂದೆಯು ಮಾಡಿದ ಉಯಿಲಿನ ಅಡಿಯಲ್ಲಿ ಫಲಾನುಭವಿಯಾಗಿರುವ 3ನೇ ಸಂಖ್ಯೆಯ ಪ್ರತಿವಾದಿಯು, ಅವಳ ತಂದೆಯು ಮಾಡಿರುವ ಉಯಿಲನ್ನು ನಿರಾಕರಿಸಿರುವುದಲ್ಲದೆ, ಲಿಖಿತ ಹೇಳಿಕೆಯಲ್ಲಿ, ತನ್ನ ತಂದೆಗೆ, ಅವನ ಮರಣದ ಸಮಯದಲ್ಲಿ ಸುಮಾರು 85 ವರ್ಷ ವಯಸ್ಸಾಗಿತ್ತೆಂದೂ ಮತ್ತು ಅವನು ಒಟ್ಟಾರೆಯಾಗಿ ಹಾಸಿಗೆ ಹಿಡಿದಿದ್ದನೆಂದು ತಿಳಿಸಿದ್ದಾರೆ. ಅವನು ತಾನು ಏನು ಮಾಡುತ್ತಿದ್ದೇನೆಂಬುದನ್ನು ಅರ್ಥ ಮಾಡಿಕೊಳ್ಳುವ ಸ್ಥಿತಿಯಲ್ಲಿರಲಿಲ್ಲ. ಅವನು ತನ್ನ ದೃಷ್ಟಿಯನ್ನು ಕಳೆದುಕೊಂಡಿದ್ದು, ಕೇಳಿಸಿಕೊಳ್ಳುವುದು ಕಷ್ಟವಾಗಿತ್ತು. ಆದುದರಿಂದ, ಅವನು ಅವಳ ಹೆಸರಿನಲ್ಲಿ ಮತ್ತು ಕಸ್ತೂರಿಯ ತಂದೆಯ ಹೆಸರಿನಲ್ಲಿ 29.09.1961ರಂದು ಉಯಿಲನ್ನು ಬರೆಯಲು ಸಾಧ್ಯವಾಗಿರಲಿಲ್ಲ. ಅವಳು, ದಿನಾಂಕ 29.09.1961ರ ಉಯಿಲು ಖೋಟಾ ಆಗಿದೆಯೆಂದು ಮತ್ತು ಹಾಗೆ ಮಾಡಲು ಎಂದೂ ಉದ್ದೇಶಿಸಿರಲಿಲ್ಲವೆಂದೂ ಸಹ ತಿಳಿಸಿದ್ದಾಳೆ. ದಾವಾ ಸ್ವತ್ತು ಇನ್ನೂ ಕೂಡ ಪುರಸಭೆಯ ದಾಖಲೆಗಳಲ್ಲಿ ಅವಳ ತಂದೆಯ ಹೆಸರಿನಲ್ಲಿವೆ. ಅವಳು ದಾವಾ ಸ್ವತ್ತಿಗೆ ಸಂಬಂಧಿಸಿದ ಮನೆ ತೆರಿಗೆ, ವಿದ್ಯುಚ್ಛಕ್ತಿ ವೆಚ್ಚ ಮುಂತಾದವುಗಳನ್ನು ಪಾವತಿಸುತ್ತಿದ್ದಾಳೆ. ಅದೇ ರೀತಿಯಲ್ಲಿ ಅವಳು, 4ನೇ ಸಂಖ್ಯೆಯ ಪ್ರತಿವಾದಿಯ ಹೆಸರಿನಲ್ಲಿ 31.05.1963ರಂದು ಕಸ್ತೂರಿಯು ಬರೆದ ಉಯಿಲನ್ನೂ ಮತ್ತು 26.05.1973ರಲ್ಲಿ ಬರೆದ ಕ್ರಯಪತ್ರದ ಮೂಲಕ 5ನೇ ಸಂಖ್ಯೆಯ ಪ್ರತಿವಾದಿಗೆ ದಾವಾ ಸ್ವತ್ತಿನ ಅರ್ಧಭಾಗವನ್ನು ಮಾರಾಟ ಮಾಡಲು 4ನೇ ಸಂಖ್ಯೆಯ ಪ್ರತಿವಾದಿಯ ಹಕ್ಕನ್ನು ಕೂಡ ನಿರಾಕರಿಸಿದ್ದಾಳೆ. ಅವಳು ತನ್ನ ಲಿಖಿತ ಹೇಳಿಕೆಯಲ್ಲಿ, ದಾವಾ ಸ್ವತ್ತಿನಲ್ಲಿ ತಾನು 1/5 ಪಾಲಿನ ಭಾಗಕ್ಕೆ ಹಕ್ಕುಳ್ಳವಳಾಗಿದ್ದೇನೆಂದೂ ಸಹ ತಿಳಿಸಿದ್ದಾಳೆ.

4. ಪ್ರತಿವಾದಿ ಸಂಖ್ಯೆ 4 ಮತ್ತು 5 ಇವರು ಜಂಟಿ ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದು, ವಂಶಸ್ಥನು ವಾಸ್ತವವಾಗಿ 21.09.1961ರಂದು ಉಯಿಲನ್ನು ಬರೆದಿರುವನೆಂದು ನಿವೇದಿಸಿದ್ದಾರೆ. ವಾದಿಗೆ ಅವಳ ತಂದೆ ಮಾಡಿರುವ ಉಯಿಲಿನ ಬಗ್ಗೆ ಸಂಪೂರ್ಣ ಅರಿವಿದೆ. ಸದರಿ ಸ್ವತ್ತು ಸಂಪೂರ್ಣವಾಗಿ ವಂಶಸ್ಥನಿಗೆ ಸೇರಿದ್ದು, ಅವನು ಉಯಿಲನ್ನು ಬರೆಯುವ ಎಲ್ಲಾ ಹಕ್ಕನ್ನೂ ಹೊಂದಿದ್ದಾನೆ. ಆ ಸಮಯದಲ್ಲಿ ಅವನು ಸಮಚಿತ್ತ ಹೊಂದಿದ್ದನು. ಉಯಿಲನ್ನು ನಿರ್ವಹಿಸಲಾಗಿತ್ತು. ಉಯಿಲಿನ ಅಡಿಯಲ್ಲಿ ಬರುವ ಫಲಾನುಭವಿಗಳಲ್ಲಿ ಒಬ್ಬರಾದ ಕಸ್ತೂರಿಯು ಕೂಡ 31.05.1963ರಂದು 4ನೇ ಸಂಖ್ಯೆಯ ಪ್ರತಿವಾದಿಯ ಹೆಸರಿನಲ್ಲಿ ಉಯಿಲನ್ನು ಬರೆದಿದ್ದಾಳೆ. 4ನೇ ಸಂಖ್ಯೆಯ ಪ್ರತಿವಾದಿಯು, ಅವನ ಪತ್ನಿಯ ಮರಣದ ನಂತರ ದಾವಾ ಸ್ವತ್ತಿನ ಅರ್ಧಭಾಗದ ಮಾಲೀಕನಾಗಿರುವುದರಿಂದ, ಅವನು, 26.05.1973ರಂದು ಕ್ರಯಪತ್ರ ನೋಂದಾವಣಿ ಮಾಡುವ ಮೂಲಕ 5ನೇ ಸಂಖ್ಯೆಯ ಪ್ರತಿವಾದಿಗೆ ಆ ಭಾಗವನ್ನು ಮಾರಾಟ ಮಾಡಿದ್ದಾನೆ. ಈ ಇಬ್ಬರು ಪ್ರತಿವಾದಿಗಳು, ವಾದಿಯ ಪಾಲಿನ ಕ್ಲೇಮಿನ ಹಕ್ಕನ್ನು ಹಾಗೆಯೇ ಹಿಂದೂ ಉತ್ತರಾಧಿಕಾರ ಅಧಿನಿಯಮದ 22ನೇ ಪ್ರಕರಣದ ಮೇರೆಗಿನ ಅವಳ ಹಕ್ಕನ್ನೂ ನಿರಾಕರಿಸಿದ್ದಾರೆ.

5. ಅಧಿವಿಚಾರಣಾ ನ್ಯಾಯಾಲಯವು, ದಾವೆಯನ್ನು ವಜಾಗೊಳಿಸಿದೆ. ಅಧಿವಿಚಾರಣಾ ನ್ಯಾಯಾಲಯದ ತೀರ್ಪನ್ನು ಸ್ಥಿರೀಕರಿಸಿ ವಾದಿಯ ಅಪೀಲು ಆರ್.ಎ. ಸಂಖ್ಯೆ 74/96ನ್ನು ಜಮಖಂಡಿಯ ತ್ವರಿತಗತಿ ನ್ಯಾಯಾಲಯವು ವಜಾಗೊಳಿಸಿತ್ತು. ಆದುದರಿಂದ ಈ ಎರಡನೇ ಅಪೀಲು.

6. ಕಾನೂನಿನ ಈ ಗಣನಾರ್ಹ ಪ್ರಶ್ನೆಯ ಆಧಾರದ ಮೇಲೆ ಈ ಅಪೀಲನ್ನು 29.03.2006ರಂದು ಅಂಗೀಕರಿಸಲಾಗಿತ್ತು. ಅದು ಈ ಮುಂದಿನಂತಿರುತ್ತದೆ:–

> “ಮೂಲ ಉಯಿಲನ್ನು ಹಾಜರುಪಡಿಸದಿದ್ದರೂ, ಸದರಿ ಉಯಿಲನ್ನು ರುಜುವಾತುಪಡಿಸಲು ಅನುಪ್ರಮಾಣಿತ ಸಾಕ್ಷಿದಾರರನ್ನು ಪರಿಶೀಲಿಸದಿದ್ದರೂ, ಉಯಿಲನ್ನು ರುಜುವಾತುಪಡಿಸಲಾಗಿದೆಯೇ..?”

7. ನನ್ನ ಅಭಿಪ್ರಾಯದಲ್ಲಿ, ಈ ಕಾನೂನಿನ ಪ್ರಶ್ನೆಯು, ಕೊಂಚ ಮಾರ್ಪಾಡನ್ನು ಬಯಸುತ್ತದಾದ್ದರಿಂದ, ಕಾನೂನಿನ ವಾಸ್ತವಿಕ ಗಣನೀಯ ಪ್ರಶ್ನೆ ಉದ್ಭವಿಸಿದ್ದು, ಅದು, ನಿಶಾನೆ ಪ್ರತಿವಾದಿ ಸಾಕ್ಷ್ಯ.1 ತನ್ನ ಮಗಳಾದ ಸಣ್ಯವ್ವ ಮತ್ತು ಮೊಮ್ಮಗಳಾದ ಕಸ್ತೂರಿಯ ಹೆಸರಿನಲ್ಲಿ ದಿನಾಂಕ 29.9.1961ರಂದು ಗುರಪ್ಪ ಚನ್ನಪರಪ್ಪ ಮಂಡಿಯು ಉಯಿಲನ್ನು ಬರೆದಿರುವರು ಎಂದು ಅಭಿಪ್ರಾಯಪಡಲು ಭಾರತೀಯ ನೋಂದಣಿ ಅಧಿನಿಯಮದ 58 ರಿಂದ 60ನೇ ಪ್ರಕರಣಗಳ ಉಪಬಂಧಗಳನ್ನು ಅನ್ವಯಿಸಿ ಅಧೀನ ನ್ಯಾಯಾಲಯಗಳು ಕಾನೂನಿನಲ್ಲಿ ಸಮರ್ಥಿಸಿಕೊಂಡಿವೆಯೇ ಎಂಬ ಪ್ರಶ್ನೆಯಾಗಿದೆ".

8. ಅಪೀಲುದಾರ–ವಾದಿಯ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು, ಅಧೀನ ನ್ಯಾಯಾಲಯದ ತೀರ್ಪನ್ನು ಖಂಡಿಸುತ್ತಾ, ನಿಶಾನೆ ಡಿ1ರ ಉಯಿಲನ್ನು 4 ಮತ್ತು 5ನೇ ಪ್ರತಿವಾದಿಗಳು ಹಾಜರುಪಡಿಸಿದ್ದರೆಂದು ವಾದಿಸಿದ್ದಾರೆ. ಕನಿಷ್ಠ ಪಕ್ಷ ಒಬ್ಬರು ದೃಢೀಕರಣ ಮಾಡುವವರಿಂದ ಉಯಿಲನ್ನು ಜಾರಿಗೊಳಿಸುವುದನ್ನು ರುಜುವಾತುಪಡಿಸುವುದು ಅವರಿಗೆ ಸಂಬಂಧಪಟ್ಟ ಸಂಗತಿಯಾಗಿರುತ್ತದೆ. ದೃಢೀಕರಣ ಮಾಡುವವರು ಲಭ್ಯವಾಗದಿದ್ದಾಗ, ಭಾರತೀಯ ಸಾಕ್ಷ್ಯ ಅಧಿನಿಯಮದ (ಇಲ್ಲಿ ಇನ್ನು ಮುಂದೆ ಸಂಕ್ಷಿಪ್ತತೆಗಾಗಿ 'ಸಾಕ್ಷ್ಯ ಅಧಿನಿಯಮ' ಎಂದು ಉಲ್ಲೇಖಿಸಲಾಗಿದೆ.) 69ನೇ ಪ್ರಕರಣಕ್ಕೆ ಅನುಸಾರವಾಗಿ ಉಯಿಲನ್ನು ರುಜುವಾತುಪಡಿಸುವುದು ಅವರಿಗೆ ಲಭ್ಯವಿರುವ ಮುಂದಿನ ಮಾರ್ಗವಾಗಿರುತ್ತದೆ. ಉಯಿಲನ್ನು ರುಜುವಾತುಪಡಿಸಲು ದೃಢೀಕರಣ ಮಾಡಿದವರ ಬರವಣಿಗೆ ಇರುವ ಗುರುತುಳ್ಳ ವ್ಯಕ್ತಿಯನ್ನು ಮತ್ತು ಉಯಿಲಿನ ನಿರ್ವಾಹಕನನ್ನು ಅವರು ಕರೆಸಬೇಕು. ಸದರಿ ಉಯಿಲಿನ ಅಡಿಯಲ್ಲಿ, ಫಲಾನುಭವಿಗಳಾಗಿರುವವರಲ್ಲಿ ಒಬ್ಬರು ಕಸ್ತೂರಿ ಎಂಬುವರಾಗಿದ್ದು, 4ನೇ ಪ್ರತಿವಾದಿಯ ಪತ್ನಿಯಾಗಿದ್ದು, ಇವರು ಪ್ರತಿಯಾಗಿ ತನಗೆ ಉಯಿಲಿನ ಮೂಲಕ ಬಂದ ಸಂಬಂಧಪಟ್ಟ ಭಾಗವನ್ನು ತನ್ನ ಪತಿಯ ಹೆಸರಿಗೆ ಮತ್ತೊಂದು ಉಯಿಲನ್ನು ಬರೆದಿದ್ದಾರೆ. 4ನೇ ಸಂಖ್ಯೆಯ ಪ್ರತಿವಾದಿಯು, ನಂತರ ಸ್ವತ್ತನ್ನು 5ನೇ ಸಂಖ್ಯೆಯ ಪ್ರತಿವಾದಿಗೆ ಮಾರಾಟ ಮಾಡಿದ್ದಾನೆ. 3ನೇ ಸಂಖ್ಯೆಯ ಪ್ರತಿವಾದಿಯು ಉಯಿಲು

ಬರೆದಿರುವುದನ್ನು ವಿರೋಧಿಸಿದ್ದಾರೆ. ಆದುದರಿಂದ, ಮೂಲ ಉಯಿಲು 4ನೇ ಸಂಖ್ಯೆಯ ಅಥವಾ 5ನೇ ಸಂಖ್ಯೆಯ ಪ್ರತಿವಾದಿಯ ಬಳಿ ಇರಬೇಕಿತ್ತು. ಮೂಲ ಉಯಿಲನ್ನು ಹಾಜರುಪಡಿಸದಿರುವುದನ್ನು ಅಧಿವಿಚಾರಣಾ ನ್ಯಾಯಾಲಯ ಮತ್ತು ಮೊದಲ ಅಪೀಲು ನ್ಯಾಯಾಲಯ ಗಂಭೀರವಾಗಿ ಪರಿಗಣನೆಗೆ ತೆಗೆದುಕೊಳ್ಳಬೇಕಿತ್ತು. ಅಧಿವಿಚಾರಣಾ ನ್ಯಾಯಾಲಯವು, ಇದಕ್ಕಿಂತ ಹೆಚ್ಚಾಗಿ, ಉಯಿಲನ್ನು ಬರೆದಿರುವುದು ರುಜುವಾತಾಗಿಲ್ಲ ಎಂಬ ಸಂಗತಿಯನ್ನು ಗಮನಿಸದೆ, ಭಾರತೀಯ ಸಾಕ್ಷ್ಯ ಅಧಿನಿಯಮದ 68 ಅಥವಾ 69ನೇ ಪ್ರಕರಣಗಳ ಪ್ರಕಾರವಾಗಿ ಭಾರತೀಯ ನೋಂದಣಿ ಅಧಿನಿಯಮದ 58 ರಿಂದ 60ನೇ ಪ್ರಕರಣಗಳಲ್ಲಿ ಉಲ್ಲೇಖಿಸಿರುವ ಪ್ರಕ್ರಿಯೆಯು ಕಾನೂನುಬಾಹಿರವಾಗಿತ್ತು. ಅಷ್ಟೇ ಅಲ್ಲದೆ, ಮಾನ್ಯ ವಕೀಲರು, ಸಂದೇಹಾಸ್ಪದ ಸನ್ನಿವೇಶಗಳನ್ನು ಗಮನಿಸಿ ಸದರಿ ಉಯಿಲನ್ನು ವಜಾಗೊಳಿಸಬೇಕಾಗಿತ್ತು ಎಂದು ವಾದಿಸಿದ್ದಾರೆ. ಅವರ ಪ್ರಕಾರ ವಂಶಸ್ಥನ ಸ್ವತ್ತಿಗೆ ಉತ್ತರಾಧಿಕಾರಿಯಾಗುವುದರಿಂದ ಇತರ ಹೆಣ್ಣುಮಕ್ಕಳ ವಾರಸುದಾರಿಕೆಯನ್ನು ತಪ್ಪಿಸಿ, ಫಲಾನುಭವಿಗಳು ಸಕ್ರಿಯವಾಗಿ ಪಾಲ್ಗೊಂಡಿರುವುದು, ಮೂಲ ಉಯಿಲನ್ನು ಹಾಜರುಪಡಿಸದಿರುವುದು, ತುಂಬಾ ದೀರ್ಘಕಾಲದವರೆಗೆ ಉಯಿಲನ್ನು ಬಹಿರಂಗಪಡಿಸದಿರುವುದು ಮತ್ತು 3ನೇ ಸಂಖ್ಯೆಯ ಪ್ರತಿವಾದಿಯು ಉಯಿಲು ಬರೆದಿರುವುದನ್ನು ತಿರಸ್ಕರಿಸಿರುವುದು – ಈ ಎಲ್ಲವೂ ಸಂದೇಹಾಸ್ಪದ ಸನ್ನಿವೇಶಗಳಾಗಿದ್ದು, ಇವುಗಳನ್ನು ಉಯಿಲಿನ ನೈಜತೆಯನ್ನು ನಿರಾಕರಿಸಿದ ಸಂಬಂಧ ಅಧೀನ ನ್ಯಾಯಾಲಯಗಳು ಪರಿಗಣಿಸಬೇಕಾಗಿತ್ತು. ಆದುದರಿಂದ, ಅವರು, ಎರಡೂ ಅಧೀನ ನ್ಯಾಯಾಲಯಗಳು, ಕಾನೂನಿನಲ್ಲಿ ಪ್ರಮಾದವೆಸಗಿವೆಯೆಂದು ವಾದಿಸಿದ್ದಾರೆ.

9. ಎದುರುದಾರರು ಪ್ರತಿವಾದಿಗಳ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು, 19.08.1995ರಂದು, ಸಾಕ್ಷ್ಯವನ್ನು ದಾಖಲಿಸುವುದನ್ನು ಪ್ರಾರಂಭಿಸುವ ಮೊದಲು ಮೂಲ ಉಯಿಲನ್ನು ಹಾಜರುಪಡಿಸಲು 3ನೇ ಸಂಖ್ಯೆಯ ಪ್ರತಿವಾದಿಗೆ ನೋಟೀಸನ್ನು ಹೊರಡಿಸಲಾಗಿತ್ತು ಎಂದು ವಾದಿಸಿದ್ದಾರೆ. ಅವಳು ಇದನ್ನು ಹಾಜರುಪಡಿಸಿರಲಿಲ್ಲ ಮತ್ತು ಅದು ಇವಳ ವಶದಲ್ಲಿರಲಿಲ್ಲವೆಂದು ತಿಳಿಸಿದ್ದಾರೆ. ಇದು, 4 ಮತ್ತು 5ನೇ ಸಂಖ್ಯೆಯ ಪ್ರತಿವಾದಿಗಳು ಎರಡನೆಯ ಸಾಕ್ಷ್ಯವನ್ನು ಹಾಜರುಪಡಿಸಲು

ಮುಂದಾದರು ಎಂಬುದನ್ನು ಇದನ್ನು ತೋರಿಸುತ್ತದೆ. ವಿಷಯದ ಈ ಸಂಗತಿಯನ್ನು ಪರಿಗಣಿಸಿ, ಅಧಿವಿಚಾರಣಾ ನ್ಯಾಯಾಲಯವು, ನಿಶಾನೆ ಡಿ.1 ಎಂದು ಗುರುತು ಮಾಡಲಾಗಿದ್ದ ಉಯಿಲಿನ ಪ್ರಮಾಣಿತ ಪ್ರತಿಯ ಹಾಜರಾತಿಗೆ ಅನುಮತಿಸಿತ್ತು. ಅಷ್ಟೇ ಅಲ್ಲದೆ, ಅವರು ಉಯಿಲನ್ನು ಹಾಜರುಪಡಿಸುವವರು ದೃಢೀಕರಣ ಮಾಡಿದವರನ್ನು ವಿಚಾರಣೆ ಮಾಡಲು ಸಾಧ್ಯವಾಗಿಲ್ಲ ಏಕೆಂದರೆ ಅವರು ಬದುಕಿರಲಿಲ್ಲ. ಉಯಿಲನ್ನು ಬರೆದಿರುವವನೂ ಸಹ ಬದುಕಿರಲಿಲ್ಲ. ಅಧಿವಿಚಾರಣಾ ನ್ಯಾಯಾಲಯವು ಈ ಸನ್ನಿವೇಶಗಳನ್ನು ಗಮನಿಸಿ ಮತ್ತು ಭಾರತೀಯ ನೋಂದಣಿ ಅಧಿನಿಯಮದ 58 ರಿಂದ 60ರ ಉಪಬಂಧಗಳನ್ನು ಅನ್ವಯಿಸಿ ಉಯಿಲನ್ನು ಬರೆದಿರುವುದು ರುಜುವಾತಾಗಿದೆಯೆಂದು ಅಭಿಪ್ರಾಯಪಟ್ಟಿದ್ದರೆ, ಇದರಲ್ಲಿ ಯಾವುದೇ ಕಾನೂನು ಬಾಹಿರತೆ ಇರುತ್ತಿರಲಿಲ್ಲ. ದೃಢೀಕೃತನು ಇಲ್ಲದಿರುವುದರಿಂದ ಅವನನ್ನು ವಿಚಾರಿಸಲು ಸಾಧ್ಯವಾಗದಿದ್ದಾಗ ಉಯಿಲನ್ನು ನೋಂದಣಿ ಮಾಡಿದ್ದರೆ, ನೋಂದಾಯಿತ ಉಯಿಲನ್ನು ಒಳಗೊಂಡಂತೆ ನೋಂದಾಯಿತ ದಸ್ತಾವೇಜನ್ನು ಭಾರತೀಯ ನೋಂದಣಿ ಅಧಿನಿಯಮದ 58 ರಿಂದ 60ನೇ ಪ್ರಕರಣಗಳನ್ನು ಉಲ್ಲೇಖ ಮಾಡುವುದು ಸಾಬೀತುಪಡಿಸುವ ನೋಂದಾಯಿತ ವಿಧಾನಗಳಲ್ಲಿ ಒಂದಾಗಿರುತ್ತದೆ. ಕಾನೂನನ್ನು ಅನ್ವಯಿಸುವ ಮೂಲಕ ಉಯಿಲನ್ನು ಜಾರಿಗೊಳಿಸುವುದಕ್ಕೆ ಸಂಬಂಧಪಟ್ಟಂತೆ ನಿರ್ಣಯವನ್ನು ನೀಡಲು ನ್ಯಾಯಾಲಯಗಳು ಬದ್ಧವಾಗಿರುತ್ತವೆ. ಅವನ ಪ್ರಕಾರ, ಉಯಿಲನ್ನು ಜಾರಿಗೊಳಿಸುವುದಕ್ಕೆ ಸಂಬಂಧಪಟ್ಟಂತೆ ಯುಕ್ತ ಭಾವನೆಯನ್ನು ಹೊಂದಿರುವುದಾದರೆ, ಭಾರತೀಯ ಸಾಕ್ಷ್ಯ ಅಧಿನಿಯಮದ 69ನೇ ಪ್ರಕರಣವನ್ನು ಅವಲಂಬಿಸುವ ಅಗತ್ಯವಿರುವುದಿಲ್ಲ. ಈ ಮೊದಲಿನ ವ್ಯಾಜ್ಯದಲ್ಲಿ ವಂಶಸ್ಥನು ಉಯಿಲು ಬರೆದಿರುವ ಬಗ್ಗೆ ಸ್ವತಃ ಅವನೇ ಒಪ್ಪಿಕೊಂಡಿರುವ ಕಾರಣವೊಂದರಿಂದ ಈ ಪ್ರಕರಣದಲ್ಲಿ, ವಾದಿಯು, ವಂಶಸ್ಥನು ಉಯಿಲನ್ನು ಬರೆದಿಲ್ಲವೆಂಬ ಮತ್ತು ನಿಶಾನೆ ಡಿ.1ರ ಪ್ರಕಾರ ಹಾಜರುಪಡಿಸಲಾದ ಉಯಿಲು, ಸೃಷ್ಟಿಸಲಾದುದು ಅಥವಾ ಖೋಟಾ ಎಂಬ ನಿಲುವನ್ನು ತಳೆಯುವ ಪರಿಸ್ಥಿತಿಯಲ್ಲಿಲ್ಲ. ಅವನು, ವಾದಪತ್ರವನ್ನು ತಿದ್ದುಪಡಿ ಮಾಡಲು ಅರ್ಜಿಯನ್ನು ಸಲ್ಲಿಸಿದ್ದು, ಆ ಅರ್ಜಿಯೊಂದಿಗೆ ಸಲ್ಲಿಸಿದ ಅಫಿಡವಿಟ್‌ನಲ್ಲಿ, ವಂಶಸ್ಥನು ಉಯಿಲನ್ನು ರದ್ದುಗೊಳಿಸಿರುವುದನ್ನು ತಿಳಿಸಿದ್ದಾನೆ. ಅಫಿಡವಿಟ್‌ನಲ್ಲಿ ಕಂಡುಬರುವ ಈ ಹೇಳಿಕೆಯು, ವಂಶಸ್ಥನು ಉಯಿಲನ್ನು ಬರೆದಿದ್ದು,

ಅವನ ಪ್ರಕಾರ ಉಯಿಲನ್ನು ವಜಾಗೊಳಿಸಲಾಗಿದೆ ಎಂಬುದನ್ನು ತೋರಿಸುತ್ತದೆ. ಹೀಗಾಗಿ, ಉಯಿಲನ್ನು ರದ್ದುಗೊಳಿಸಲಾಗಿದೆ ಎಂಬುದನ್ನು ರುಜುವಾತುಪಡಿಸುವ ಹೊಣೆ ವಾದಿಯ ಮೇಲಿರುತ್ತದೆ. ಅಧಿವಿಚಾರಣಾ ನ್ಯಾಯಾಲಯವು ಈ ಆಯಾಮವನ್ನು ಗಮನಿಸಿದೆ. ಮಾನ್ಯ ವಕೀಲರೂ ಕೂಡ, 3ನೇ ಸಂಖ್ಯೆಯ ಪ್ರತಿವಾದಿಯನ್ನು ಮೂಲ ಉಯಿಲನ್ನು ಹಾಜರುಪಡಿಸಲು ಕೋರಲಾಗಿದ್ದು, ಅವಳು ಅದನ್ನು ಹಾಜರುಪಡಿಸಿಲ್ಲದಿರುವುದರಿಂದ ನ್ಯಾಯಾಲಯವು, ಉಯಿಲನ್ನು ಕಾನೂನಿನ ಮೇರೆಗೆ ಅಗತ್ಯಪಡಿಸಲಾದ ರೀತಿಯಲ್ಲಿ ದೃಢೀಕರಿಸಲಾಗಿತ್ತು ಮತ್ತು ನಿರ್ವಹಿಸಲಾಗಿತ್ತು ಎಂದು ಭಾವಿಸಿರುವುದನ್ನು ವಾದಿಸಲು ಭಾರತೀಯ ಸಾಕ್ಷ್ಯ ಅಧಿನಿಯಮದ 89ನೇ ಪ್ರಕರಣವನ್ನು ಉಲ್ಲೇಖಿಸಿರುವರು. ಅಷ್ಟೇ ಅಲ್ಲದೆ, ಅವರು, ಈ ಸಂದರ್ಭದಲ್ಲಿ ಅಧಿವಿಚಾರಣಾ ನ್ಯಾಯಾಲಯ ಮತ್ತು ಅಪೀಲು ನ್ಯಾಯಾಲಯವು ಯುಕ್ತವಾಗಿ ಉಯಿಲನ್ನು ಬರೆಯಲಾಗಿದೆಯೆಂಬ ನಿರ್ಣಯಕ್ಕೆ ಬಂದಿದ್ದರೆ, ತಮ್ಮ ತೀರ್ಪುಗಳು ಕಾನೂನು ಬಾಹಿರವಾಗಿವೆಯೆಂದು ಹೇಳಲು ಸಾಧ್ಯವಾಗುವುದಿಲ್ಲವೆಂದು ನಿವೇದಿಸಿದ್ದಾರೆ.

10. ಮೂಲ ಉಯಿಲಿನಲ್ಲಿ ಹಾಜರುಪಡಿಸದಿದ್ದರೂ ಕಸ್ತೂರಿ ಮತ್ತು 3ನೇ ಸಂಖ್ಯೆಯ ಪ್ರತಿವಾದಿಯ ಹೆಸರಿನಲ್ಲಿ ವಂಶಸ್ಥನು ಬರೆದಿರುವ ಉಯಿಲನ್ನು, ರುಜುವಾತುಪಡಿಸಿದೆಯೆಂಬ ನಿರ್ಣಯಗಳನ್ನು ದಾಖಲಿಸುವ ಮೂಲಕ ಅಧಿವಿಚಾರಣಾ ನ್ಯಾಯಾಲಯವು ದಾವೆಯನ್ನು ವಜಾಗೊಳಿಸಿದೆ. ಮೂಲ ದಾಖಲೆಯನ್ನು ಹಾಜರುಪಡಿಸದಿರುವುದರ ಸಂಬಂಧದಲ್ಲಿ ಅಧಿವಿಚಾರಣಾ ನ್ಯಾಯಾಲಯವು, 4 ಮತ್ತು 5ನೇ ಸಂಖ್ಯೆ ಪ್ರತಿವಾದಿಗಳು, ಆ ಉಯಿಲಿನ ಮೇಲೆ ತಮ್ಮ ಕ್ಲೇಮನ್ನು ಆಧರಿಸಿರುವಾಗ ಮೂಲ ಉಯಿಲನ್ನು ಅವರು ಹಾಜರುಪಡಿಸಿದ್ದರು ಎಂದು ಅವರು ನೀಡಿದ ವಿವರಣೆಯನ್ನು ನಂಬಿಕೊಂಡಿತ್ತು. ಇದನ್ನು ಮುಚ್ಚಿಡುವ ಅಗತ್ಯವಿರಲಿಲ್ಲ. 3ನೇ ಸಂಖ್ಯೆಯ ಪ್ರತಿವಾದಿ ಉಯಿಲಿನ ಅಡಿಯಲ್ಲಿ ಫಲಾನುಭವಿಯೂ ಆಗಿದ್ದು, ಅವಳು ಅವನ ಕಡೆಯ ದಿನಗಳಲ್ಲಿ ಅವಳ ತಂದೆಯೊಂದಿಗೆ ವಾಸಿಸುತ್ತಿದ್ದುದರಿಂದ ಅವಳು ಅದನ್ನು ತನ್ನ ವಶದಲ್ಲಿಟ್ಟುಕೊಳ್ಳಬೇಕಾಗಿತ್ತು. ಅವಳು ತನ್ನ ಬಳಿ ಉಯಿಲು ಇರಲಿಲ್ಲ ಎಂದು ಹೇಳುವಾಗ ಮತ್ತು ವಾದಿಯನ್ನು

ಬೆಂಬಲಿಸುವ ಫಲಾನುಭವಿಯಾಗಿ ಉಯಿಲನ್ನೇ ನಿರಾಕರಿಸುವಾಗ, ಹಾಜರಾಗಿರುವ 4 ಮತ್ತು 5ನೇ ಪ್ರತಿವಾದಿಗಳ ನಿಲುವು ಸಂಭಾವ್ಯವಾಗಿರುವುದರಿಂದ, ನಿಶಾನೆ ಡಿ.1 ಎಂದು ಗುರುತು ಮಾಡಲಾಗಿರುವ ಉಯಿಲಿನ ಪ್ರಮಾಣೀಕೃತ ಪ್ರತಿಯನ್ನು ಹಾಜರುಪಡಿಸಿರುವುದನ್ನು ಒಪ್ಪಿಕೊಳ್ಳಲಾಗಿದೆ. ಅಧಿವಿಚಾರಣಾ ನ್ಯಾಯಾಲಯವು, ಎರಡನೇ ಸಾಕ್ಷ್ಯವನ್ನು ಹಾಜರುಪಡಿಸಲು, ಅದರ ನಿರುಪಾಧಿಕ ನಿಬಂಧನೆಗಳಲ್ಲಿ ಮೂಲದ ನಷ್ಟ ಅಥವಾ ಅಲಭ್ಯತೆಯನ್ನು ರುಜುವಾತುಪಡಿಸುವುದು ಅಗತ್ಯವಾಗಿರುವುದಿಲ್ಲ. ಈ ದೃಷ್ಟಿಯನ್ನು ತೆಗೆದುಕೊಳ್ಳಲು ***ರಾಜ್‌ಕುಮಾರಿ –ವಿರುದ್ಧ– ಶ್ರೀ ಲಾಲ್ ಚಂದ್*** [1] ಪಂಜಾಬ್ ಮತ್ತು ಹರ್ಯಾಣ ಉಚ್ಚ ನ್ಯಾಯಾಲಯದ ತೀರ್ಪನ್ನು ಅವಲಂಬಿಸಲಾಗಿತ್ತು.

11. ಉಯಿಲನ್ನು ಬರೆದಿರುವುದನ್ನು ರುಜುವಾತುಪಡಿಸುವ ಸಂಬಂಧದಲ್ಲಿ, ನಿರ್ಣಯಗಳು ಹೀಗಿವೆ, ದೃಢೀಕೃತರು ಮತ್ತು ಬರೆದಿರುವವರಿಬ್ಬರೂ ಮರಣ ಹೊಂದಿರುವರೆಂದು ಕಂಡುಬಂದಾಗ, ನೋಂದಣಿ ಅಧಿನಿಯಮದ 58 ರಿಂದ 60ನೇ ಪ್ರಕರಣಗಳನ್ನು ಅವಲಂಬಿಸಬೇಕು ಮತ್ತು ಪ್ರಶ್ನಿತ ಉಯಿಲು 30 ವರ್ಷಗಳ ಹಳೇ ದಾಖಲೆಯಾಗಿರುವುದರಿಂದ ಸಾಕ್ಷ್ಯ ಅಧಿನಿಯಮದ 90ನೇ ಪ್ರಕರಣದ ಮೇರೆಗೆ ಪೂರ್ವಭಾವನೆ ತಳೆಯಬೇಕು. ಅಧಿವಿಚಾರಣಾ ನ್ಯಾಯಾಲಯವು, ***ಗುರ್‌ಬಕ್ಸ್ ಸಿಂಗ್ ಮತ್ತು ಇತರರು –ವಿರುದ್ಧ– ಬಿಷನ್‌ದಾಸ್ 'ಚೇಲಾ' ಕೌಲ್ ದಾಸ್ ಮತ್ತು ಇತರರು*** [2], ಪ್ರಕರಣದಲ್ಲಿನ ತೀರ್ಪನ್ನು ಉಲ್ಲೇಖಿಸಲಾಗಿದ್ದು, ಇದರಲ್ಲಿ, ರಿಜಿಸ್ಟ್ರಾರ್‌ರವರು ನೀಡಿದ ಪ್ರಮಾಣಪತ್ರವು, ಸ್ವಲ್ಪಮಟ್ಟಿಗೆ ದಸ್ತಾವೇಜನ್ನು ಜಾರಿಗೊಳಿಸುವ ಸಾಕ್ಷ್ಯವಾಗಿದ್ದು, ರಿಜಿಸ್ಟ್ರಾರ್ ಮುಂದೆ ಸಹಿಯನ್ನು ಒಪ್ಪಿಕೊಳ್ಳುವುದು, ದಸ್ತಾವೇಜಿನ ಸಾಕ್ಷ್ಯದ ರೂಪವಾಗಿರುತ್ತದೆಯೆಂದು ಅಭಿಪ್ರಾಯಪಡಲಾಗಿದೆ. ಇದು ಕೆಲವು ಇತರ ನಿರ್ಣಯಗಳನ್ನು ಉಲ್ಲೇಖಿಸಿದೆ (i) ***ಹನುಮಪ್ಪ ಬೀಮಪ್ಪ ಕೌಜಗೇರಿ –ವಿರುದ್ಧ– ಬೀಮಪ್ಪ ಸಂಗಪ್ಪ ಅಸಾರಿ***[3], (ii) ***ಶಿವ್‌ದಾಸ್ ಮತ್ತು ಇತರರು ವಿರುದ್ಧ ದೇವ್‌ಕಿ ಮತ್ತು ಇತರರು*** [4], (iii) ***ಕುನ್ನಮಿನ ಎಮ್ಮಾ ಮತ್ತು ಇತರರು –ವಿರುದ್ಧ–***

1. 1994 (1) ಸಿಸಿಸಿ 477    2. ಎಐಆರ್ 1970 ಪಿ ಮತ್ತು ಎಚ್182

***ವಿಶೇಷ ತಹಸೀಲ್ದಾರ್ ಮತ್ತು ಇತರರು***[5], ಇವುಗಳಲ್ಲಿ ಅಂತಿಮವಾಗಿ, ಉಪ–ನೋಂದಣಾಧಿಕಾರಿಯವರ ಪ್ರಮಾಣೀಕರಣವು ಉಯಿಲಿನಲ್ಲಿ ಲಭ್ಯವಿರುವುದರಿಂದ ಇದನ್ನು ನಿರ್ವಾಹಕನೇ ನೋಂದಣಿಗಾಗಿ ದಸ್ತಾವೇಜನ್ನು ಸಲ್ಲಿಸಿರುವರೆಂದು ಮತ್ತು ಸದರಿ ಪ್ರಮಾಣೀಕರಣವು, ಕಾರ್ಯಗತಗೊಳಿಸುವುದಕ್ಕೆ ಸಂಬಂಧಿಸಿದ ರುಜುವಾತಿಗೆ ಸಾಕಷ್ಟಾಗುವುದೆಂದು ತೀರ್ಮಾನಿಸಲಾಗಿದೆ. ಅಧಿವಿಚಾರಣಾ ನ್ಯಾಯಾಲಯವೂ ಕೂಡ, ಉಯಿಲು ಸಂದೇಹಾಸ್ಪದ ಸನ್ನಿವೇಶಗಳಿಂದ ಮುಕ್ತವಾಗಿದೆಯೆಂಬ ನಿರ್ಣಯವನ್ನು ನೀಡಿದ್ದು, ವಾದಿಯ ದಾವೆಯನ್ನು ವಜಾಗೊಳಿಸಿತ್ತು.

12. ಅಧಿವಿಚಾರಣಾ ನ್ಯಾಯಾಲಯವು ತೀರ್ಪನ್ನು ಪುಷ್ಟೀಕರಿಸಿರುವುದರಿಂದ ಮೊದಲ ಅಪೀಲು ನ್ಯಾಯಾಲಯವು ನೀಡಿದ ಸಂಪೂರ್ಣ ಸಮರ್ಥನೆಗಳನ್ನು ವಿವರಿಸುವುದು ಅನಗತ್ಯವಾದುದಾಗಿದೆ.

13. ಗಣನೀಯವಾದ ಕಾನೂನಿನ ಪ್ರಶ್ನೆಗೆ, ಮಾನ್ಯ ವಕೀಲರು ಮುಂದಿಟ್ಟ ವಾದಗಳ ಬೆಳಕಿನಲ್ಲಿ ಉತ್ತರವನ್ನು ನೀಡಬೇಕಾಗುತ್ತದೆ. ಈ ನ್ಯಾಯಾಲಯದ ಮುಂದಿರುವ ಪ್ರಕರಣದಲ್ಲಿ, ಎರಡು ಉಯಿಲುಗಳಿದ್ದವು. ವಿವಾದಿತ ಉಯಿಲು ಒಂದನ್ನು ದಿನಾಂಕ 29.9.1961ರಂದು ವಂಶಸ್ಥನು ನಿರ್ವಹಿಸಿದ್ದನೆಂದು ಹೇಳಲಾಗಿದೆ. ಎರಡನೇ ಉಯಿಲನ್ನು, ಶ್ರೀಮತಿ ಕಸ್ತೂರಿ ಎಂಬಾಕೆಯು ಅವಳ ಗಂಡನ ಹೆಸರಿನಲ್ಲಿ ಎಂದರೆ 4ನೇ ಸಂಖ್ಯೆಯ ಪ್ರತಿವಾದಿಯ ಹೆಸರಿನಲ್ಲಿ ಬರೆದಿದ್ದಳು. ಮೊದಲನೇ ಉಯಿಲನ್ನು ವಂಶಸ್ಥನು ಬರೆದಿದ್ದಾನೆಂದು ಮತ್ತು ವಿವಾದಿತ ಸನ್ನಿವೇಶಗಳಿಂದ ಮುಕ್ತವಾಗಿದೆಯೆಂದು ಅಭಿಪ್ರಾಯಪಟ್ಟರೆ ಎರಡನೇ ಉಯಿಲು ನೀಡಿ ಅದನ್ನು ಜಾರಿಗೊಳಿಸುವುದಕ್ಕೆ ಸಂಬಂಧಪಟ್ಟಂತೆ ಅದರ ಹೆಚ್ಚು ಸನ್ನಿವೇಶಗಳನ್ನು ರುಜುವಾತಿಗೆ ನೀಡುವ ಅಗತ್ಯವಿಲ್ಲದೆ ಸಿಂಧುವಾಗುತ್ತದೆ.

14. ಉಯಿಲನ್ನು ರುಜುವಾತುಪಡಿಸುವ ಸಂಬಂಧದಲ್ಲಿ, ಕಾನೂನು ಸುಸ್ಥಾಪಿತವಾಗಿದೆ ಮತ್ತು ಆ ಅಂಶದ ಮೇಲೆ ಅನೇಕ ನಿರ್ಣಯಗಳಿವೆ. ಉಯಿಲುದಾರನು ಮರಣ ಹೊಂದಿದ ನಂತರವಷ್ಟೇ ಜಾರಿಗೆ ಬಂದಿರುವುದರಿಂದ

3. ಐಎಲ್ಆರ್ 1996 ಕೆಎಆರ್ 1517 4. ಎಐಆರ್ 1978 ಪಿ ಮತ್ತು ಹೆಚ್ 285
5. ಎಐಆರ್ 1977 ಕೇರಳ 41

ಉಯಿಲು ಸಾಮಾನ್ಯವಾಗಿ ವಿವಾದದ ವಿಷಯವಾಗಿದೆ; ಮತ್ತು ಸಾಕ್ಷ್ಯ ಅಧಿನಿಯಮದ 68ನೇ ಪ್ರಕರಣದ ಪ್ರಕಾರ ಕನಿಷ್ಠ ಪಕ್ಷ ಒಬ್ಬ ದೃಢೀಕೃತ ಸಾಕ್ಷಿದಾರರನ್ನು, ಈ ಕಾರಣಕ್ಕಾಗಿ, ಪರೀಕ್ಷಿಸುವುದು ಕಟ್ಟುನಿಟ್ಟಿನ ಕಾನೂನಿನ ಅಗತ್ಯವಾಗಿದೆ. ರುಜುವಾತಿನ ಭಾರವು, ಉಯಿಲಿನ ಪ್ರತಿಪಾದಕನ ಮೇಲಿರುತ್ತದೆ. ದೃಢೀಕರಿಸುವ ಸಾಕ್ಷಿದಾರರನ್ನು ಪರಿಶೀಲಿಸುವ ಮೂಲಕ ಉಯಿಲನ್ನು ರುಜುವಾತುಪಡಿಸಬೇಕು ಎಂಬುದು ತುಂಬಾ ಅಗತ್ಯವಾಗಿರುತ್ತದೆ, ದೃಢೀಕೃತರು ಯಾರೂ ಲಭ್ಯವಾಗದಿದ್ದರೆ, ಸಾಕ್ಷ್ಯ ಅಧಿನಿಯಮದ 69ನೇ ಪ್ರಕರಣವು ಅನುಸರಿಸಬೇಕಾದ ಪ್ರಕ್ರಿಯೆಯನ್ನು ನಿಯಮಿಸಿದೆ. ಸಾಕ್ಷ್ಯ ಅಧಿನಿಯಮದ 68ನೇ ಪ್ರಕರಣ ಅಥವಾ 69ನೇ ಪ್ರಕರಣಗಳ ಅಡಿಯಲ್ಲಿ ಉಯಿಲು ಜಾರಿಯಾಗಿರುವುದನ್ನು ರುಜುವಾತುಪಡಿಸಲು ಆಗದಿದ್ದರೆ, ಸಾಕ್ಷ್ಯ ಅಧಿನಿಯಮದ 90ನೇ ಪ್ರಕರಣದ ಮೇರೆಗಿನ ಪೂರ್ವಭಾವನೆಯನ್ನು ನಿರೂಪಿಸುವುದು ಕಡೆಯ ಮಾರ್ಗವಾಗಿರಲೇಬೇಕು. ಪ್ರತಿಪಾದಕನು, ಸಾಕ್ಷ್ಯ ಅಧಿನಿಯಮದ 69ನೇ ಪ್ರಕರಣದ ಮೇರೆಗೆ ಉಪಬಂಧಿಸಲಾದಂತೆ ಪ್ರಕ್ರಿಯೆಯನ್ನು ಅನುಸರಿಸುವ ಮೂಲಕ ಉಯಿಲನ್ನು ಜಾರಿಗೊಳಿಸಿರುವುದನ್ನು ರುಜುವಾತುಪಡಿಸುವುದು ಅಸಾಧ್ಯವೆಂಬುದನ್ನು ಕಂಡುಕೊಂಡು, ಉಯಿಲನ್ನು ನೋಂದಾವಣಿ ಮಾಡಿದ್ದರೆ ನೋಂದಣಿ ಅಧಿನಿಯಮದ 60ನೇ ಪ್ರಕರಣದ ಮೇರೆಗಿನ ನೋಂದಣಿಯ ಪ್ರಮಾಣಪತ್ರವನ್ನು ಸಹ ಅವಲಂಬಿಸಬಹುದು. ಉಯಿಲಿನ ನೋಂದಾವಣಿಯು, ಅದರ ನೈಜತೆಯ ಬಗ್ಗೆಯಾಗಲಿ ಅಥವಾ ದಸ್ತಾವೇಜಿನಲ್ಲಿರುವ ರಿಜಿಸ್ಟ್ರಾರ್‌ರವರ ಸಹಿಯನ್ನು, ಆ ದೃಢೀಕೃತನ ಸಹಿಗೆ ಸಮಾನವಾಗಿ ಪರಿಭಾವಿಸುವ ಬಗ್ಗೆಯಾಗಲಿ ಯಾವುದೇ ಪೂರ್ವಭಾವನೆಯನ್ನು ಸೃಜಿಸಿರುವುದಿಲ್ಲ. ***ಎಮ್.ಎಲ್. ಅಬ್ದುಲ್ ಜಬ್ಬರ್ ಸಾಹಿಬ್ –ವಿರುದ್ಧ– ಎಚ್. ವೆಂಕಟಶಾಸ್ತ್ರಿ ಮತ್ತು ಮಕ್ಕಳು ಹಾಗೂ ಇತರರು***[5], ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ:

> "10. ಭಾರತೀಯ ನೋಂದಣಿ ಅಧಿನಿಯಮ, 1908, ದಸ್ತಾವೇಜುಗಳ ನೋಂದಣಿಗೆ ಸಂಬಂಧಿಸಿದಂತೆ ಸವಿವರವಾದ

5. ಎಐಆರ್ 1969 ಎಸ್‌ಸಿ 1147

ಪ್ರಕ್ರಿಯೆಯನ್ನು ನಿರೂಪಿಸಿದೆ. ನೋಂದಣಿ ಅಧಿಕಾರಿಯು, ಆ ವ್ಯಕ್ತಿಯು ದಸ್ತಾವೇಜನ್ನು ನಿರ್ವಹಿಸಿದ್ದಾನೆಯೇ ಎಂಬುದನ್ನು ಪರಿಶೀಲಿಸುವುದು, ಅವನ ಕರ್ತವ್ಯವಾಗಿದ್ದು, ಇದನ್ನು ನಿರ್ವಹಿಸಲಾಗಿರುವುದನ್ನು ಅರ್ಥಮಾಡಿಸುವುದು ಮತ್ತು ಬರೆದುಕೊಟ್ಟವನ ಗುರುತಿನ ಬಗ್ಗೇ ತಾನೇ ಮನವರಿಕೆ ಮಾಡಿಕೊಳ್ಳುವುದು: 34(3)ನೇ ಪ್ರಕರಣ. ದಸ್ತಾವೇಜನ್ನು ಬರೆದಿರುವ ವ್ಯಕ್ತಿಯ ಗುರುತಿನ ಬಗ್ಗೆ ಅವನಿಗೆ ಮನವರಿಕೆಯಾದರೆ ಮತ್ತು ಆ ವ್ಯಕ್ತಿ ಮತ್ತು ಬರೆದಿರುವುದನ್ನು ಅವನು ಒಪ್ಪಿಕೊಂಡರೆ [35(1)ನೇ ಪ್ರಕರಣ] ಅವರು ನೋಂದಣಿಯನ್ನು ಮಾಡಬಹುದು. ಬರೆದಿರುವವನ ಮತ್ತು ದಸ್ತಾವೇಜಿಗೆ ಸಂಬಂಧಿಸಿದಂತೆ ಪರಿಶೀಲಿಸಲಾದ ಪ್ರತಿಯೊಬ್ಬ ವ್ಯಕ್ತಿಗಳ ಸಹಿಗಳನ್ನು, ದಸ್ತಾವೇಜಿನ ಹಿಂಭಾಗದಲ್ಲಿ ಹಿಂಬರಹ ಮಾಡುವುದು (ಪ್ರಕರಣ 58). ನೋಂದಣಿ ಅಧಿಕಾರಿಯು, ಹಿಂಬರಹಗಳಿಗೆ (59ನೇ ಪ್ರಕರಣ) ದಿನಾಂಕ ಮತ್ತು ಆತನ ಸಹಿಯನ್ನು ಹಾಕುವುದು ಅಗತ್ಯವಾಗಿರುತ್ತದೆ. ಮೊದಲ ನೋಟಕ್ಕೆ, ನೋಂದಣಿ ಅಧಿಕಾರಿಯು, ನೋಂದಣಿ ಅಧಿನಿಯಮದ 59ನೇ ಪ್ರಕರಣದ ಮೇರೆಗೆ ತನ್ನ ಶಾಸನಬದ್ಧ ಕರ್ತವ್ಯವನ್ನು ಚಲಾಯಿಸಿ ದಸ್ತಾವೇಜಿನಲ್ಲಿ ತನ್ನ ಸಹಿಯನ್ನು ಹಾಕಿರುತ್ತಾನೆಯೇ ಹೊರತು, ಅದನ್ನು ದೃಢೀಕರಿಸುವ ಉದ್ದೇಶ ಕುರಿತು ಅಥವಾ ಬರೆದುಕೊಟ್ಟವನಿಂದ ಅವನ ಸಹಿಯ ವೈಯಕ್ತಿಕ ಸ್ವೀಕೃತಿ ಸ್ವೀಕರಿಸಲಾಗಿದೆಯೆಂಬುದನ್ನು ಅವರು ಪ್ರಮಾಣೀಕರಿಸುವುದಕ್ಕಲ್ಲ."

15. ಇಲ್ಲಿ, ಅಧಿವಿಚಾರಣಾ ನ್ಯಾಯಾಲಯವು, ಉಯಿಲನ್ನು ಯುಕ್ತವಾಗಿ ಬರೆದಿರುವ ಬಗ್ಗೆ ಊಹೆ ಮಾಡಲು ನೋಂದಣಿ ಅಧಿನಿಯಮದ 58 ರಿಂದ 60ನೇ ಪ್ರಕರಣವನ್ನು ಅನ್ವಯಿಸುವುದು. ಉಯಿಲಿನ ಪ್ರತಿಪಾದಕರು, ದೃಢೀಕರಣ ಮಾಡಿದವರು ಮತ್ತು ಉಯಿಲು ಬರೆದಿರುವವರು ಮೃತರಾಗಿರುವರೆಂದು ತಿಳಿಸಿದ್ದಾರೆ. ಈ ಕಾರಣಕ್ಕಾಗಿ, ಸಾಕ್ಷ್ಯ ಅಧಿನಿಯಮದ 68ನೇ ಪ್ರಕರಣದ ಮೇರೆಗೆ

ಉಪಬಂಧಿಸಲಾದಂಥ ಉಯಿಲಿನ ರುಜುವಾತು ಸಾಧ್ಯವಾಗಿರಲಿಲ್ಲ. ಆದುದರಿಂದ ಅಧೀನ ನ್ಯಾಯಾಲಯಗಳು ಸರಿಯಾಗಿ, ಈ ಕೆಳಗಿನ ನಿರ್ಣಯಕ್ಕೆ ಬಂದಿರುತ್ತವೆ. ಆದರೆ, ನೋಂದಣಿ ಅಧಿನಿಯಮದ 58 ರಿಂದ 60ನೇ ಪ್ರಕರಣಗಳನ್ನು ಉಲ್ಲೇಖಿಸುವ ಮೊದಲು ಪ್ರತಿಪಾದಕರು, ಸಾಕ್ಷ್ಯ ಅಧಿನಿಯಮದ 69ನೇ ಪ್ರಕರಣವನ್ನು ಅವಲಂಬಿಸಿದ್ದನೇ ಎಂಬ ಬಗ್ಗೆ ಅಧಿವಿಚಾರಣಾ ನ್ಯಾಯಾಲಯವು ವಿಚಾರಣೆ ಮಾಡಿರಲಿಲ್ಲ. ಆ ರೀತಿಯಲ್ಲಿ, ಅಧೀನ ನ್ಯಾಯಾಲಯಗಳು, ನೋಂದಣಿ ಅಧಿನಿಯಮದ 58 ರಿಂದ 60ನೇ ಪ್ರಕರಣಗಳನ್ನು ಉಲ್ಲೇಖಿಸುವುದನ್ನು ನೇರ ರೀತಿಯಲ್ಲಿ ಕಾನೂನುಬದ್ಧವಾಗಿ ಸಮರ್ಥಿಸಿಕೊಂಡಿರಲಿಲ್ಲ. ಆದುದರಿಂದ ಕಾನೂನಿನ ಗಣನೀಯ ಪ್ರಶ್ನೆಗೆ ನಕಾರಾತ್ಮಕವಾಗಿ ಉತ್ತರಿಸಬೇಕಾದ ಅಗತ್ಯತೆಯಿದೆ. ಈ ಪ್ರಕರಣವನ್ನು ಮತ್ತೊಂದು ದೃಷ್ಟಿಕೋನದಿಂದಲೂ ಪರಿಶೀಲಿಸಬಹುದಾಗಿದೆ. ಸಾಕ್ಷ್ಯ ಅಧಿನಿಯಮದ 89ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಎದುರುದಾರನ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ಇದನ್ನು ಈ ಮುಂದಿನಂತೆ ಓದಿರುವರು:–

> “**೮೯. ಯುಕ್ತ ಜಾರಿ, ಮುಂತಾದವುಗಳನ್ನು ಹಾಜರುಪಡಿಸಿಲ್ಲವೆಂಬ ಬಗ್ಗೆ ಪೂರ್ವಭಾವನೆ.**– ನ್ಯಾಯಾಲಯವು, ಹಾಜರುಪಡಿಸಬೇಕೆಂಬ ನೋಟೀಸನ್ನು ನೀಡಿದ ನಂತರ ಕೋರಲಾದ ಮತ್ತು ಹಾಜರುಪಡಿಸಿದ ಪ್ರತಿಯೊಂದು ದಸ್ತಾವೇಜನ್ನು, ಕಾನೂನಿನ ಮೂಲಕ ಅಗತ್ಯಪಡಿಸಲಾದ ರೀತಿಯಲ್ಲಿ ದೃಢೀಕರಿಸಲಾಗಿತ್ತು. ಮೊಹರು ಮಾಡಲಾಗಿತ್ತು ಜಾರಿಗೊಳಿಸಲಾಗಿತ್ತು ಎಂದು ಪೂರ್ವಭಾವಿಸತಕ್ಕದ್ದು.”

16. ಉಯಿಲಿನ ಅಡಿಯಲ್ಲಿ ಫಲಾನುಭವಿಯೂ ಆಗಿದ್ದು, ಅವಳ ಬಳಿ ಅದು ಇದ್ದುದರಿಂದ 3ನೇ ಸಂಖ್ಯೆಯ ಪ್ರತಿವಾದಿಯು, ಮೂಲ ಉಯಿಲನ್ನು ಹಾಜರುಪಡಿಸಲು ಕೋರಲಾಗಿತ್ತು ಎಂಬುದು ನಮ್ಮ ಮುಂದಿರುವ ಸಂಗತಿಯಾಗಿದೆ. ವಾಸ್ತವವಾಗಿ ಅದು ಅವರ ವಶದಲ್ಲಿದ್ದರೆ, ವಿಶೇಷವಾಗಿ ಆ ಉಯಿಲಿನ ಸಂಪೂರ್ಣ ವಾದವನ್ನು ಅವರು ಆಧರಿಸಿರುವಾಗ ನ್ಯಾಯಾಲಯದ ಮುಂದೆ ಉಯಿಲನ್ನು ಹಾಜರುಪಡಿಸದಿರಲು ಪ್ರತಿಪಾದಕರಿಗೆ ಯಾವುದೇ ಕಾರಣವಿರುತ್ತಿರಲಿಲ್ಲ. 3ನೇ

ಸಂಖ್ಯೆಯ ಪ್ರತಿವಾದಿಯು ಅದನ್ನು ಹಾಜರುಪಡಿಸದಿದ್ದಾಗ ಉಯಿಲನ್ನು ನಿರಾಕರಿಸುವುದಲ್ಲದೆ ಅದನ್ನು ಅವಳು ಹೊಂದಿಲ್ಲವೆಂದು ಹೇಳುವಾಗ, ಅವಳ ನಡತೆಯು ಆತ್ಮ ಸಾಕ್ಷಿಗೆ ವಿರುದ್ಧವಾಗಿರುವುದು ಕಂಡು ಬರುತ್ತಿದೆ; ಅವಳ ಪ್ರಕಾರ ಅವನು ಕುಟುಂಬಕ್ಕೆ ಅನ್ಯ ವ್ಯಕ್ತಿಯಾಗಿರುವುದರಿಂದ ಸ್ವತ್ತನ್ನು 4ನೇ ಸಂಖ್ಯೆಯ ಪ್ರತಿವಾದಿಗೆ ತಪ್ಪಿಸಲು ಅವಳು ಅಂಥ ನಿಲುವನ್ನು ತಳೆದಿರಬಹುದು. ಇದು ಮೊದಲ ಅಪೀಲು ನ್ಯಾಯಾಲಯದ ಅಭಿಪ್ರಾಯವಾಗಿದ್ದು, ಇದು ಇಲ್ಲದೆ ಇರುವಂಥದ್ದೇನೂ ಅಲ್ಲ. ಆದುದರಿಂದ 3ನೇ ಸಂಖ್ಯೆಯ ಪ್ರತಿವಾದಿಯು ಅದನ್ನು ವಶದಲ್ಲಿಟ್ಟುಕೊಂಡು ಉಯಿಲನ್ನು ಹಾಜರುಪಡಿಸದಿಲ್ಲದಿರುವಾಗ, ಇದನ್ನು ಹಾಗೆ ಭಾವಿಸಿರುವುದರಿಂದ, ಉಯಿಲಿನ ದೃಢೀಕರಣ ಮತ್ತು ಬರೆದಿರುವುದಕ್ಕೆ ಸಂಬಂಧಪಟ್ಟಂತೆ ಸಾಕ್ಷ್ಯ ಅಧಿನಿಯಮದ 89ನೇ ಪ್ರಕರಣದ ಮೇರೆಗೆ ಪೂರ್ವಭಾವನೆಯನ್ನು ತಳೆಯಬಹುದಾಗಿದೆ.

17. ಅಧೀನ ನ್ಯಾಯಾಲಯಗಳು ಗಮನಿಸಿರುವ ಮತ್ತೊಂದು ಸನ್ನಿವೇಶವಿದೆ. ವಾದಿಯು, ಅಪೀಲಿನ ಅಡಿಯಲ್ಲಿ ಪ್ರಸ್ತುತ ದಾವೆಯಲ್ಲಿ 4 ಮತ್ತು 5ನೇ ಸಂಖ್ಯೆಯ ಪ್ರತಿವಾದಿಯ ವಿರುದ್ಧದ ಶಾಶ್ವತ ಪ್ರತಿಬಂಧಕಾಜ್ಞೆಗಾಗಿ ಮೂಲ ದಾವೆ ಸಂಖ್ಯೆ: 91/1982ರಲ್ಲಿ ದಾವೆಯನ್ನು ಸಲ್ಲಿಸಿದ್ದರೆಂಬ ಸಂಗತಿಯನ್ನು ಒಪ್ಪಿಕೊಳ್ಳಲಾಗಿದೆ. ಆ ದಾವೆಯಲ್ಲಿ ದಿನಾಂಕ: 29.09.1961ರ ಉಯಿಲನ್ನು ಈ ಪ್ರತಿವಾದಿಗಳು ಅವಲಂಬಿಸಿರುವುದನ್ನು ಗಮನಿಸಿದ್ದು, ಸದರಿ ಉಯಿಲನ್ನು ರದ್ದುಗೊಳಿಸಲಾಗಿದೆಯೆಂದು ತಿಳಿಸಲು ಅವಳ ವಾದಪತ್ರವನ್ನು ತಿದ್ದುವ ಪ್ರಯತ್ನ ಮಾಡಲಾಗಿದೆ. ನ್ಯಾಯಾಲಯವು, ಆ ತಿದ್ದುಪಡಿಗೆ ಅನುಮತಿ ನೀಡಿರಲಿಲ್ಲ ಆದರೆ, ಅದರಲ್ಲಿ ಏನೇ ಒಳಗೊಂಡಿದ್ದರೂ, ವಾದಿಯು, ಅವಳ ತಂದೆಯು ಉಯಿಲನ್ನು ಬರೆದಿರುವ ಬಗ್ಗೆ ಅರಿವಿತ್ತು ಎಂದು ಊಹಿಸುವ ಆಧಾರವನ್ನು ಒದಗಿಸಲಾಗಿದೆ. ಇಲ್ಲಿ ಈ ಪ್ರಕರಣದಲ್ಲಿ, ವಾದಿಯು, ಸದರಿ ಉಯಿಲು ಖೋಟಾ ಆಗಿದೆಯೆಂದು ಹೇಳಿಕೆ ನೀಡಿರಬಹುದು, ಆದರೆ, ವಿರುದ್ಧದ ನಿಲುವನ್ನು ತೆಗೆದುಕೊಳ್ಳುವುದರಿಂದ ಅವಳ ಮೊದಲಿನ ದಾವೆಯಲ್ಲಿ ಮಾಡಲಾದ ಅವಳ ಪೂರ್ವ ಹೇಳಿಕೆಯು, ಅವಳನ್ನು ಅಡ್ಡಿಪಡಿಸುವುದಷ್ಟೇ ಅಲ್ಲದೆ, ವಾದಿಯ ಕಾನೂನು ಪ್ರತಿನಿಧಿ ಪ್ರಾ.ಸಾ.1ನ್ನೂ

ಸಹ ಅಡ್ಡಿಪಡಿಸುತ್ತದೆ. ಅಧಿವಿಚಾರಣಾ ನ್ಯಾಯಾಲಯವು ಹಿಂದಿನ ಹೇಳಿಕೆಯನ್ನು ಸಂಬಂಧಪಟ್ಟ ಸಾಕ್ಷ್ಯವನ್ನು ದಾಖಲಿಸುವ ಹೊತ್ತಿಗೆ ಅವಳು ಮೃತಳಾಗಿದ್ದರಿಂದ, ಹೇಳಿಕೆಯನ್ನು ಅವಳ ಗಮನಕ್ಕೆ ತಂದಿರುವುದನ್ನು, ವಾದಿಯ ಮೂಲಕ ರುಜುವಾತುಪಡಿಸಲು ಸಾಧ್ಯವಾಗಿರುವುದಿಲ್ಲವೆಂದು ಅಭಿಪ್ರಾಯಪಟ್ಟಿದೆ. ವಾದಪತ್ರದಲ್ಲೇ ವಾದಿಯು, ಹಿಂದಿನ ದಾವೆಯಲ್ಲಿ ತನ್ನ ವಾದಪತ್ರವನ್ನು ತಿದ್ದಲು ಬಯಸಿದ್ದೆನೆಂದು, ನಿರ್ದಿಷ್ಟವಾಗಿ ತಿಳಿಸಿರುವುದರಿಂದ, ವಾದಿಯು ಅಥವಾ ಪ್ರಾ.ಸಾ.1ರ ಗಮನಕ್ಕೆ ತರುವುದು ಅಗತ್ಯವಾಗಿರಲಿಲ್ಲ ಎಂಬುದು ಅವಶ್ಯವಾಗಿದೆ. ವಾದಪತ್ರದಲ್ಲಿರುವ ಈ ದೃಢೋಕ್ತಿಯು, ಸಾಕ್ಷ್ಯ ಅಧಿನಿಯಮದ 58ನೇ ಪ್ರಕರಣದ ಮೇರೆಗಿನ ಒಪ್ಪಿಗೆಗೆ ಕಾರಣವಾಗುತ್ತದೆ ಮತ್ತು ಅವಳ ತಂದೆಯು, ಉಯಿಲನ್ನು ಬರೆದಿದ್ದು, ಅವಳ ಪ್ರಕಾರ ಅದನ್ನು ರದ್ದುಗೊಳಿಸಲಾಗಿದೆಯೆಂಬುದನ್ನು ವಾದಿಯ ಗಮನಕ್ಕೆ ತರಲಾಗಿತ್ತೆಂಬ ಯುಕ್ತ ಊಹೆಗಳನ್ನು ಮಾಡಬಹುದಾಗಿದೆ. ಯಾವುದೇ ರೀತಿಯಲ್ಲಿ ದಾವೆಯನ್ನು ಅವರ ಪರವಾಗಿ ಡಿಕ್ರಿಗೊಳಿಸಲಾಗಿದ್ದರೆ, ವಾದಿಯು ಅಥವಾ ಅವಳ ಕಾನೂನು ಪ್ರತಿನಿಧಿಯು, ಉಯಿಲನ್ನು ರದ್ದುಗೊಳಿಸಿರುವುದನ್ನು ರುಜುವಾತುಪಡಿಸಬೇಕು. ಇದನ್ನು ಮಾಡಿರದಿದ್ದುದರಿಂದ, 4 ಮತ್ತು 5ನೇ ಪ್ರತಿವಾದಿಗಳು ತೆಗೆದುಕೊಂಡ ವಾದವು ಅಂಗೀಕೃತವಾಗುತ್ತದೆ. ಆದುದರಿಂದ, ಈ ಪ್ರಕರಣದ ಸನ್ನಿವೇಶಗಳ ಗುಚ್ಛದಲ್ಲಿ, ಉಯಿಲನ್ನು ಬರೆದಿರುವುದನ್ನು, ಸಾಕ್ಷ್ಯ ಅಧಿನಿಯಮದ 69ನೇ ಪ್ರಕರಣದ ಪ್ರಕಾರ ರುಜುವಾತುಪಡಿಸದಿದ್ದರೂ, 4 ಮತ್ತು 5ನೇ ಸಂಖ್ಯೆಯ ಪ್ರತಿವಾದಿಗಳು ಮುಂದಿಟ್ಟಿರುವ ವಾದದಲ್ಲಿ ಬಾಹುಳ್ಯತೆಯಿದೆ.

18. ಸಂದೇಹಾಸ್ಪದ ಸನ್ನಿವೇಶಗಳಿಗೆ ಸಂಬಂಧಿಸಿದಂತೆ ಅಪೀಲುದಾರರ ವಕೀಲರು, ತಮ್ಮ ವಾದ-ವಿವಾದದ ಅವಧಿಯಲ್ಲಿ ಪಟ್ಟಿ ಮಾಡಿದ್ದು ಅದು ಅಧೀನ ನ್ಯಾಯಾಲಯಗಳೆರಡೂ, ಉಯಿಲು, ಸಂದೇಹಾಸ್ಪದ ಸನ್ನಿವೇಶಗಳಿಂದ ಮುಕ್ತವಾಗಿದೆಯೆಂಬ ಸಂಗತಿಗಳ ಆಧಾರದ ಮೇಲೆ ಅಭಿಪ್ರಾಯಪಟ್ಟಿವೆಯೆಂದು ನಿರೂಪಿಸಬೇಕಾಗುತ್ತದೆ. ಅವಳ ಹೆಸರಿನಲ್ಲಿ ಉಯಿಲನ್ನು ಒಪ್ಪದಿರುವ ಸಂದರ್ಭದಲ್ಲಿ ಮೂರನೇ ಪ್ರತಿವಾದಿಯ ನಡತೆಯನ್ನು ಚರ್ಚಿಸಲಾಗಿದೆ. ಮೊದಲ ಅಪೀಲು

ನ್ಯಾಯಾಲಯವು, ಅವಳ ಮತ್ತು ವಾದಿಯ ನಡುವೆ ಹೂಟವೇರ್ಪಟ್ಟಿರುವುದನ್ನು ಗುರುತಿಸಿದೆ. ಅಪೀಲುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು, ಸಂಗತಿಯನ್ನು ಕಂಡುಹಿಡಿಯುವ ನ್ಯಾಯಾಲಯಗಳು ಸಾಕ್ಷ್ಯವನ್ನು ಯುಕ್ತವಾಗಿ ಮೌಲ್ಯಮಾಪನ ಮಾಡಲು ವಿಫಲವಾಗಿದೆಯೆಂಬುದನ್ನು ಪ್ರದರ್ಶಿಸಲು ವಿಫಲವಾಗಿವೆ. ಸಂಗತಿಗಳನ್ನಾಧರಿಸಿದ ನಿರ್ಣಯಗಳಲ್ಲಿ ಹಸ್ತಕ್ಷೇಪ ಮಾಡಲು ಸಾಧ್ಯವಿಲ್ಲ. ಇದರ ಪರಿಣಾಮವಾಗಿ ಈ ಅಪೀಲು ವಿಫಲವಾಗಿರುವುದರಿಂದ ಅಪೀಲನ್ನು ವೆಚ್ಚವಿಲ್ಲದೆ ವಜಾಗೊಳಿಸಲಾಗಿದೆ.